
# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 11 Issue - 7 Swabhimani Sahakari Monthly Pages - 20 ₹ - 12 July 2013



ಕಂತರಂಗನ ಮಟ್ಟಿಯ ಮೇಲೆ ಕಪ್ಪೋಕಪ್ಪಿನ
ಮೋಡದ ಆಲೆ
ಗುಡು ಗುಡು ಗುಡುಗು, ಚಟ ಚಟ ಸಿಡಿಲು,
ಭೋರ್ ಭೋರ್ ಗಾಳಿ
ಮಾಡಲು ಧಾಳಿ, ಹಿತ್ತಲ ಮರದಿಂ ತೆಂಗಿನ
ಮಡಲು ಧೊಪ್ಪನೆ
ನೆಲಕ್ಕೆ ಬೀಳುತಲಿರಲು, ಬಂತೈ ಬಂತೈ
ಮುಂಗಾರ್ ಮಳೆಯು!
ಧೋ ಧೋ ಸುರಿಯಿತು ಮಳೆ ತಲೆ ಕೆಳಗೆ
ರೆಪ್ಪೆಯ ಮುಚ್ಚಿ ತೆರೆಯುವ ಒಳಗೆ . . .

- ಎಚ್.ಎಸ್. ವೆಂಕಟೇಶಮೂರ್ತಿ



## 6 ಜುಲೈ 2013 ಅಂತರ ರಾಷ್ಟ್ರೀಯ ಸಹಕಾರಿಗಳ ದಿನಾಚರಣೆ

"ಸಹಕಾರಿ ಸಂಘಟನೆಗಳು ವಿಪತ್ತಿನಲ್ಲೂ ಸಹ ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ"

– ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ

ಸೌಹಾರ್ದ ಸಹಕಾರಿಗಳ ಸಂಖ್ಯೆ : 2480 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 502



ಅಧ್ಯಕ್ಷರ ಮಾತು

ನಮ್ಮ ದೇಶದ ಸಹಕಾರಿ ಚಳುವಳಗೆ ಈಗ 109 ವರ್ಷಗಳ ಇತಿಹಾಸವಿದೆ. ಸುಮಾರು 6 ಲಕ್ಷಕ್ಕೂ ಹೆಚ್ಚು ವಿವಿಧ ರೀತಿಯ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. 25 ಕೋಟಿಗೂ ಹೆಚ್ಚು ಸದಸ್ಯ ಬಳಗವಿದೆ. 34 ಸಾವಿರ ಕೋಟಿ ರೂ.ಗಳ ಪಾಲು ಬಂಡವಾಳ, 38 ಸಾವಿರ ಕೋಟಿ ರೂ.ಗಳ ಠೇವಣಿ ರೂ.70 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ದುಡಿಯುವ ಬಂಡವಾಳವಿದೆ. ದೇಶದ ಎಲ್ಲ ಹಳ್ಳಿಗಳಿಗೂ ವ್ಯಾಪಿಸಿದೆ. ಶೇಕಡಾ 97% ಜನರು ಸಹಕಾರ ಕ್ಷೇತ್ರದ ವ್ಯಾಪ್ತಿಯಲ್ಲಿದ್ದಾರೆ.

# ಮಾನವ ಸಂಪನ್ಮೂಲ ಅಭಿವೃದ್ಧಿಗೆ ಆದ್ಯತೆ

ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು “6 ಜುಲೈ 2013 ಅಂತರ ರಾಷ್ಟ್ರೀಯ ಸಹಕಾರಿ ದಿನ” ವೆಂದು ಘೋಷಿಸಿದ್ದಾರೆ. ಜಗತ್ತಿನ ಎಲ್ಲ ಸಹಕಾರಿ ಬಾಂಧವರು ಈ ದಿನದಂದು ಸಹಕಾರಿ ಕ್ಷೇತ್ರದ ಪ್ರಗತಿಯ ಬಗ್ಗೆ ಒಮ್ಮೆ ಅವಲೋಕನ ಮಾಡಿ ಮುಂಬರುವ ದಿನಗಳಲ್ಲಿ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳಿಗೆ ಚಾಲನೆ ನೀಡುವುದು ಅವಶ್ಯಕ. ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ಸಂಯುಕ್ತ ಸಹಕಾರಿ ಶುಭಾಶಯಗಳನ್ನು ಸಲ್ಲಿಸುತ್ತದೆ. ಹಾಗೂ ಪ್ರಪಂಚದ ಸಹಕಾರಿ ಕ್ಷೇತ್ರದ ಉತ್ತಮ ಕಾರ್ಯನಿರ್ವಹಣೆಗಾಗಿ ಅಭಿವೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸುತ್ತದೆ.

ನಮ್ಮ ದೇಶ ಸಂಪದ್ಭರಿತ ದೇಶ. ಬ್ರಿಟೀಷರು ಸೇರಿದಂತೆ ಅನೇಕ ವಿದೇಶಿ ರಾಷ್ಟ್ರಗಳು ಶತಮಾನಗಳಿಂದ ನಮ್ಮ ದೇಶದ ಸಂಪತ್ತನ್ನು ಲೂಟಿಮಾಡಿದರೂ ಸಹ ನಮ್ಮ ದೇಶ ಬಡವಾಗಲಿಲ್ಲ. ನಮ್ಮ ದೇಶವನ್ನು ಅನೇಕ ವರ್ಷಗಳಿಂದ ಆಳ್ವಿಕೆ ಮಾಡಿದ ಬ್ರಿಟೀಷರು ನಮ್ಮ ದೇಶವನ್ನು ಆಳಿದ ಸಂದರ್ಭದಲ್ಲಿ ಭಾರತ ಸಂಪತ್ಭರಿತ ದೇಶ ಆದರೆ ಭಾರತೀಯರು ಬಡವರು ಹಿಂದೊಮ್ಮೆ ಹೇಳಿದ್ದುಂಟು. (India is rich. But Indians are poor) ಈ ಹೇಳಿಕೆಯನ್ನು ಪ್ರತಿಯೊಬ್ಬ ಭಾರತೀಯನೂ ಗಮನಿಸಬೇಕಾದ ವಿಷಯವೆಂದು ನನ್ನ ಅನಿಸಿಕೆ. ನಮ್ಮ ದೇಶದಲ್ಲಿ ಸ್ವಾಭಾವಿಕ ಸಂಪನ್ಮೂಲಗಳು ಹೇರಳವಾಗಿರುವಂತೆ ಮಾನವಸಂಪನ್ಮೂಲವೂ ಸಾಕಷ್ಟಿದೆ. ಈ ಮಾನವ ಸಂಪನ್ಮೂಲದ ಸದ್ಬಳಕೆಯಾಗುವುದಕ್ಕಾಗಿ ವಿಶೇಷವಾಗಿ ಸಹಕಾರಿ ಕ್ಷೇತ್ರದಲ್ಲಿ ಚಿಂತನೆ ಅಗತ್ಯ.

ಸ್ವಾತಂತ್ರ ನಂತರದ ಬಂದ ನಮ್ಮ ಸರಕಾರ ವಿಶೇಷವಾಗಿ ನೂತನ ಅರ್ಥ ವ್ಯವಸ್ಥೆ ಜಾರಿಯಾದ ದಿನದಿಂದ ಅಂದರೆ ಆರ್ಥಿಕ ಅಭಿವೃದ್ಧಿಗೆ ಹೆಚ್ಚು ಒತ್ತುಕೊಟ್ಟು ಜಾಗತಿಕರಣ, ಉದಾರೀಕರಣ ಹಾಗೂ ಖಾಸಗೀಕರಣವನ್ನು ಪ್ರೋತ್ಸಾಹಿಸುವ ನಿರ್ಣಯದಿಂದ ದೇಶದ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಮಹತ್ವವನ್ನು ಕೊಟ್ಟು ಕೇಂದ್ರದಲ್ಲಿ ಇದಕ್ಕಾಗಿ ಒಂದು ಪ್ರತ್ಯೇಕ ಖಾತೆಯನ್ನೆ ಸೃಷ್ಟಿಮಾಡಿ ತನ್ಮೂಲಕ ಅನೇಕ ಯೋಜನೆಗಳನ್ನು ಜಾರಿಮಾಡಿದೆ.

ಸಹಕಾರ ಕ್ಷೇತ್ರದಲ್ಲೂ ಸಹ ಈ ಕೆಲಸ ಆಗಬೇಕಿದೆ. ಈ ಪೈಪೋಟಿ ಯುಗ, ವೇಗದ ಯುಗ, ತಾಂತ್ರಿಕ ಯುಗ, ವೈಜ್ಞಾನಿಕ ಯುಗ, ಜ್ಞಾನದ ಯುಗಗಳಲ್ಲಿ ಅರ್ಥಪೂರ್ಣವಾಗಿ ಬದುಕ ಬಯಸುವ ಎಲ್ಲರೂ ಹಾಗೂ ವಿಶೇಷವಾಗಿ ಗ್ರಾಮೀಣ ಅಭಿವೃದ್ಧಿಯ ಮೂಲಮಂತ್ರವನ್ನಾಗಿಸಿರುವ ಈ ಸಹಕಾರಿ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಪರಿಣಾಮಕಾರಿಯಾಗುವ ಉತ್ತಮ ಕಾರ್ಯಯೊಜನೆಗಳನ್ನು ಜಾರಿಮಾಡುವುದು ಅಗತ್ಯ.

ನಮ್ಮ ದೇಶದ ಸಹಕಾರಿ ಚಳುವಳಿಗೆ ಈಗ 109 ವರ್ಷಗಳ ಇತಿಹಾವಿದೆ. ಸುಮಾರು 6 ಲಕ್ಷಕ್ಕೂ ಹೆಚ್ಚು ವಿವಿಧ ರೀತಿಯ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. 25 ಕೋಟಿಗೂ ಹೆಚ್ಚು ಸದಸ್ಯ ಬಳಗವಿದೆ. 34 ಸಾವಿರ ಕೋಟಿ ರೂ.ಗಳ ಪಾಲು ಬಂಡವಾಳ, 38 ಸಾವಿರ ಕೋಟಿ ರೂ.ಗಳ ಠೇವಣಿ ರೂ.70 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ದುಡಿಯುವ ಬಂಡವಾಳವಿದೆ. ದೇಶದ ಎಲ್ಲ ಹಳ್ಳಿಗಳಿಗೂ ವ್ಯಾಪಿಸಿದೆ. ಶೇಕಡಾ 97% ಜನರು ಸಹಕಾರ ಕ್ಷೇತ್ರದ ವ್ಯಾಪ್ತಿಯಲ್ಲಿದ್ದಾರೆ. ಸಹಕಾರ ಕ್ಷೇತ್ರ ಈ ದೇಶದ ಜನರ ಆರ್ಥಿಕ ಅಭಿವೃದ್ಧಿಯ ಸಾಧನವಾಗಿ, ದೇಶದ ಅರ್ಥಿಕ ವ್ಯವಸ್ಥೆಯ ಪಾಲುದಾರನಾಗಿ ದೇಶದ ಜನರ ಜೀವನ ಪದ್ಧತಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇಂತಹ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಕಾರ್ಯಕ್ರಮಗಳ ಅಭಿವೃದ್ಧಿ ಅವಶ್ಯಕವೆನಿಸುವುದಿಲ್ಲವೆ?.

ಇದೊಂದು ಅತ್ಯಂತ ಅವಶ್ಯಕ ದೈನಂದಿನ ಕಾರ್ಯಕ್ರಮವಾಗಬೇಕು. ಸಹಕಾರಿಗಳ ಸದಸ್ಯರಿಗಾಗಿ ಪದಾಧಿಕಾರಿಗಳಿಗಾಗಿ ನಿರ್ದೇಶಕರುಗಳಿಗಾಗಿ ಹಾಗೂ ಸಿಬ್ಬಂದಿಯವರಿಗಾಗಿ ನಿರಂತರವಾಗಿ ಅವರನ್ನು ಸಂಸ್ಥೆಯ ಎಲ್ಲ ಕಾರ್ಯಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವ ಹಾಗೆ ಪರಿಣಿತರನ್ನಾಗಿಸುವ ಕಾರ್ಯವೇ ಮಾನವ ಸಂಪನ್ಮೂಲ ಅಭಿವೃದ್ಧಿ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿ ಹೆಚ್ಚು ಜನರಿಗೆ ಉದ್ಯೋಗ ಒದಗಿಸುವುದು, ಸದಸ್ಯರಿಗೆ ಸ್ವಯಂ ಉದ್ಯೋಗಕ್ಕೆ ಅವಕಾಶಗಳನ್ನು ಒದಗಿಸುವುದು, ಮಹಿಳೆಯರಿಗೆ ಗೃಹಕೈಗಾರಿಕೆಗಳನ್ನು ಪ್ರೋತ್ಸಾಹ, ಗ್ರಾಮೀಣ ಸಣ್ಣ ಉದ್ಯೋಗಗಳಿಗೆ ಹೆಚ್ಚು ಅವಕಾಶ ಒದಗಿಸುವುಸುದು ಇವೆಲ್ಲವೂ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯದ ಅಡಿಯಲ್ಲಿಯೆ ಬರುತ್ತವೆ. ಇವುಗಳ ಜೊತಗೆ ಇನ್ನೂ ಅನೇಕ ಕಾರ್ಯಗಳನ್ನು ಸಹಕಾರಿ ಸಂಸ್ಥೆಗಳು ಮಾಡಬಹುದಾಗಿದೆ. ಇವುಗಳು ಸಂಸ್ಥೆಯ ಕಾರ್ಯಕ್ಷಮತೆ ಹೆಚ್ಚಿಸಲು ಪೂರಕವಾಗಿವೆ. ಬನ್ನಿ. ಈ ಕಾರ್ಯದಲ್ಲಿ ನಾವೆಲ್ಲರೂ ತೊಡಗಿಸಿಕೊಳ್ಳೋಣ. ಸಹಕಾರಿ ಕ್ಷೇತ್ರವನ್ನು ಅಭಿವೃದ್ಧಿಯತ್ತಕೊಂಡೊಯ್ಯೋಣ.

▶▶ ಎಸ್.ಆರ್. ಸತೀಶ್‌ಚಂದ್ರ

# ಸಂಪಾದಕೀಯ



## ಉಪವಿಧಿಗಳ ತಿದ್ದುಪಡಿ ಕಾರ್ಯಕ್ಕೆ ಅಗತ್ಯತೆ

97 ನೇ ಸಂವಿಧಾನ ತಿದ್ದುಪಡಿ ಜನವರಿ 2012ಕ್ಕೆ ಜಾರಿಯಾಗಿದೆ. ಸಹಕಾರ ಕ್ಷೇತ್ರಕ್ಕೆ ಸಂವಿಧಾನಾತ್ಮಕ ಮನ್ನಣೆ ದೊರೆತಿದೆ. ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಸಹಕಾರಿ ಸಂಸ್ಥೆಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ಹಾಗೂ ಸ್ವಾಯತ್ತತೆಯನ್ನು ನೀಡುವ ಮಹತ್ವದ ವಿಷಯಗಳನ್ನು ಈ ತಿದ್ದುಪಡಿಯಲ್ಲಿ ಅಳವಡಿಸಲಾಗಿದೆ. ರಾಜ್ಯ ಸರಕಾರಗಳಿಗೆ ಈ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳಲು ಒಂದು ವರ್ಷಗಳ ಕಾಲಾವಕಾಶ ನೀಡಲಾಗಿತ್ತು. ಪ್ರತಿ ರಾಜ್ಯದವರು ತಮ್ಮ ಸಹಕಾರಿ ಕಾಯ್ದೆಗಳಲ್ಲಿ 97ನೇ ಸಂವಿಧಾನ ತಿದ್ದುಪಡಿಯ ವಿಷಯಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಅಳವಡಿಸಿಕೊಳ್ಳದಿದ್ದರೆ 97 ನೇ ಸಂವಿಧಾನ ತಿದ್ದುಪಡಿ ತಾನೇ ತಾನಾಗಿ ಜಾರಿಗೆ ಬರುತ್ತದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿತ್ತು.ಗುಜರಾತ ಹೈಕೋರ್ಟ್‌ನಲ್ಲಿ ಈ ಬಗ್ಗೆ ಸಲ್ಲಿಸಲಾಗಿದ್ದ ರಿಟ್‌ಪಿಟಿಷನ್‌ನಲ್ಲಿ 97ನೇ ಸಂವಿಧಾನ ತಿದ್ದುಪಡಿಗಳಲ್ಲಿ ಆರ್ಟಿಕಲ್19(1)(ಸಿ) ಹಾಗೂ ಆರ್ಟಿಕಲ್43ಗಳನ್ನು ಹೊರತುಪಡಿಸಿ ಉಳಿದೆಲ್ಲ ಅನುಚ್ಛೇಧಗಳನ್ನು ರದ್ದುಪಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ (ತಿದ್ದುಪಡಿ) ವಿಧೇಯಕವು ದಿನಾಂಕ ಫೆಬ್ರವರಿ 2013 ರಂದು ಜಾರಿಗೆ ಬಂದಿದೆ. ಈ ಸಂಬಂದದಲ್ಲಿ ಕರ್ನಾಟಕ ಸೌಹಾರ್ದ ಸಹಕಾರ (ಕರಡು) ನಿಯಮಗಳು ರಚನೆಯಾಗಿವೆ. ಸಾರ್ವಜನಿಕರ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಕರಡು ನಿಯಮಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು 28/6/2013ರವರೆಗೆ ಅವಕಾಶ ಕೊಡಲಾಗಿತ್ತು. ಸೌಹಾರ್ದ ಸಹಕಾರಿಗಳ ಕರಡು ನಿಯಮಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಆಕ್ಷೇಪಣೆಗಳು ಬಂದಿವೆ ಎಂದು ತಿಳಿಯಲಾಗಿದೆ. ಈ ಆಕ್ಷೇಪಣೆಗಳೊಪಡಿಸಿ ಸಿದ್ದಪಡಿಸುವ ನಿಯಮಗಳನ್ನು ಪ್ರಕಟಿಸಿದ ಬಳಿಕ ಸಂಯುಕ್ತ ಸಹಕಾರಿಯು ಮಾದರಿ ಉಪವಿಧಿಗಳನ್ನು ಸಿದ್ದಪಡಿಸಲು ಕ್ರಮವಿಡುತ್ತದೆ. ಸದರಿ ಮಾದರಿ ಉಪವಿಧಿಗಳನ್ನು ಸಂಯುಕ್ತ ಸಹಕಾರಿಯ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಹಾಗೂ ಸಂಯುಕ್ತ ಸಹಕಾರಿಯಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2013 ಹಾಗೂ ಕರ್ನಾಟಕ ಸೌಹಾರ್ದ (ತಿದ್ದುಪಡಿ) ನಿಯಮಾವಳಿಗಳ 2013 ಹಿನ್ನೆಲೆಯಲ್ಲಿ ರಾಜ್ಯದ ಪ್ರತಿಯೊಂದು ಸಹಕಾರಿಯು ತಮ್ಮ ಉಪವಿಧಿಗಳ ತಿದ್ದುಪಡಿಗಳನ್ನು ಮಾಡಿಕೊಳ್ಳುವುದು ಅವಶ್ಯಕವಾಗಿದೆ. ತಿದ್ದುಪಡಿ ಹೇಗೆ ಮಾಡಿಕೊಳ್ಳಬೇಕೆಂಬುದರ ಬಗ್ಗೆ ಸಂಯುಕ್ತ ಸಹಕಾರಿಯು ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಏಪ್ರಿಲ್ ಮಾಹೆಯಲ್ಲಿ ಕಾರ್ಯಾಗಾರಗಳನ್ನು ನಡೆಸಿದೆ. ಉಪವಿಧಿಗಳ ತಿದ್ದುಪಡಿ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ. ಸಹಕಾರಿ ಉಪವಿಧಿಗಳ ತಿದ್ದುಪಡಿಗೆ ಅಗತ್ಯ ಕ್ರಮವಿಡಿ. ಸಹಕಾರಿ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ಭಾಗಿಯಾಗಿ. ಸಹಕಾರ ಕ್ಷೇತ್ರವನ್ನು ಮುನ್ನಡೆಸಿ.

## ಒಳ ಪುಟಗಳಲ್ಲಿ...


ಸಚಿವರುಗಳೊಂದಿಗೆ ಸಂಯುಕ್ತ ಸಹಕಾರಿ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರ ಭೇಟಿ ..... 4

3 ದಿನಗಳ ವಿಷಯಾಧಾರಿತ ಅಲ್ಪಾವಧಿ ತರಬೇತಿ ..... 5

ಮಾಜಿ ಸಹಕಾರ ಮಂತ್ರಿ ಶ್ರೀ ಎಸ್.ಎಸ್.ಪಾಟೀಲ್ ಭೇಟಿ ..... 6

ಸೌಹಾರ್ದ ಸಹಕಾರಿಗಳ ಸದಸ್ಯರ ತರಬೇತಿ ಕಾರ್ಯಕ್ರಮ ಹಾಗೂ ಕ್ರೆಡಿಟ್ ಸಹಕಾರ ಸಂಘಗಳ ಉಪವಿಧಿಗಳ ತಿದ್ದುಪಡಿ ಗುಣಮಟ್ಟ ನಿರ್ವಹಣೆ ಕಾರ್ಯಾಗಾರಗಳ ಉದ್ಘಾಟನೆ ..... 7

ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ ..... 8

ಸಹಕಾರಿ ಕಾಯ್ದೆಯ ದೋಷಗಳ ನಿವಾರಣೆಗೆ ಸೌಹಾರ್ದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದ ಪೂರ್ಣಸಹಕಾರ : ಶಾಸಕ ಶ್ರೀ ಶಿವರಾಮ ಹೆಬ್ಬಾರ ..... 9

ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ 9ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ಸಮಾರೋಪ ಸಮಾರಂಭ ..... 10–11

6 ಜುಲೈ 2013 ಅಂತರ ರಾಷ್ಟ್ರೀಯ ಸಹಕಾರಿಗಳ ದಿನಾಚರಣೆ ..... 13

ಕರ್ನಾಟಕ ಸೌಹಾರ್ದ ಸಹಕಾರಿ ಕರಡು ನಿಯಮಾವಳಿ 2013ರ ಕುರಿತಂತೆ ಸಹಕಾರಿಗಳ ಸಮಾಲೋಚನಾ ಸಭೆ ..... 14

ಸಹಕಾರ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ಅವಶ್ಯಕ – ಎಸ್.ಆರ್.ಸತೀಶ್ಚಂದ್ರ ..... 15

ವೆಬ್‌ಸೈಟ್ ಪರಿಚಯ ಮಾಲಿಕೆ ..... 16

ಸಂವಿಧಾನ ತಿದ್ದುಪಡಿ ತಂದಿರುವ ತಲ್ಲಣಗಳು ..... 17

ಜಾಗತಿಕ ಸಹಕಾರ ಕ್ಷೇತ್ರದ ಪ್ರಗತಿ – 16ನೇ ರಾಷ್ಟ್ರೀಯ ಸಹಕಾರ ಕಾಂಗ್ರೆಸ್‌ನಲ್ಲಿ ರಾಷ್ಟ್ರಪತಿ ಶ್ರೀ ಪ್ರಣವ ಮುಖರ್ಜಿ ..... 18–19

ಸಹಕಾರಿಗಳ ಪ್ರಾಮಾಣಿಕತೆ ಕ್ಷೇತ್ರದ ಅಭಿವೃದ್ಧಿಗೆ ನಾಂದಿ – ಸಹಕಾರ ಸಚಿವ ಶ್ರೀ ಮಹದೇವ ಪ್ರಸಾದ್ ..... 20

# ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ಉತ್ತಮ - ಸಹಕಾರ ಸಚಿವ ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್



ಸಹಕಾರ ಸಚಿವ ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರಾದ ಶ್ರೀ ಎಸ್.ಆರ್.ಪಾಟೀಲ್‌ರೊಂದಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್‌ಚಂದ್ರ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್ ಭೇಟಿ.

ಸಹಕಾರ ಸಚಿವ ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್‌ರವರನ್ನು ಮಾಹಿತಿ ಹಾಗೂ ತಂತ್ರಜ್ಞಾನ ಸಚಿವ ಶ್ರೀ ಎಸ್.ಆರ್. ಪಾಟೀಲ್‌ರವರೊಂದಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್‌ಚಂದ್ರ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್‌ರವರು ಭೇಟಿ ಮಾಡಿ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯ ಬಗ್ಗೆ ವಿವರಿಸಿದರು. ಹಾಗೂ ಇತ್ತೀಚಿನ 97ನೇ ಸಂವಿಧಾನ ತಿದ್ದುಪಡಿ ಆಧಾರಿತ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಸಂದರ್ಭದಲ್ಲಿ ಕೆಲವು ದೋಷಗಳನ್ನು ವಿವರಿಸಲಾಯಿತು.

- ಸೌಹಾರ್ದ ಸಹಕಾರಿ ಕಾಯ್ದೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆ ವ್ಯವಸ್ಥೆ, ಸಹ ಸದಸ್ಯತ್ವ, ನಾಮ ಮಾತ್ರ ಸದಸ್ಯತ್ವ, ನಿರ್ದೇಶಕರ ಅನರ್ಹತೆ, ಸಂಯುಕ್ತ ಸಹಕಾರಿಯ ಸಹೋದ್ಯಮ, ಪೂರಕ ಸಂಸ್ಥೆ, ಪಾಲಗಾರಿಕೆ ಸ್ಥಾಪಿಸಲು ಅವಕಾಶ, ಸಂಯುಕ್ತ ಸಹಕಾರಿಗೆ ಕಾರ್ಯಸ್ಥಗಿತ ಗೊಳಿಸಿರುವ ಸಹಕಾರಿಗಳನ್ನು ಸಮಾಪನೆಗೆ ನಿಬಂಧಕರಿಗೆ ಶಿಫಾರಸ್ಸು ಮಾಡುವ ಅಧಿಕಾರ ಸಹಕಾರಿ ನೋಂದಣಿ ಪೂರ್ವದಲ್ಲಿ ರಚನೆಯಾಗುವುದರಿಂದ ಸದೃಢತೆ ಖಚಿತತೆಯ ಕುರಿತು ಇರುವ ಪ್ರಾವಧಾನ, ಶಿಕ್ಷಣ ನಿಧಿಯ ಖರ್ಚು ವೆಚ್ಚದ ಕುರಿತು ರಚಿಸಲಾಗುವ ಸಮಿತಿ ಕೈಬಿಡುವ ಕುರಿತು.

- ಸೌಹಾರ್ದ ಸಹಕಾರಿ ಕರುಡು ನಿಯಮಗಳಿಗೆ ಸಂಬಂಧಿಸಿದಂತೆ ಸಹಕಾರಿಗಳ ಚುನಾವಣಾ ಕ್ಷೇತ್ರ ವಿಂಗಡನೆಯನ್ನು ಉಪವಿಧಿಗಳಲ್ಲಿ ಅಳವಡಿಸಲು ಅವಕಾಶ, ಲೆಕ್ಕಪರಿಶೋಧನಾ ವರದಿಯ ಜೊತೆಗೆ ಲಗತ್ತುಗಳನ್ನು ಕಳುಹಿಸುವದನ್ನು ಕೈಬಿಡುವ ಅವಕಾಶ ಹಾಗೂ ಕಾಸ್ಟ್ ಅಕೌಂಟಿಗ್, ಔಚಿತ್ಯತೆ ಲೆಕ್ಕಪರಿಶೋಧನೆ, ಆಡಳಿತ ಲೆಕ್ಕ ಪರಿಶೋಧನೆಗಳನ್ನು ಕೈಬಿಡುವುದು ತಾಂತ್ರಿಕ ಸಮಸ್ಯೆಗಳನ್ನು ಬಗೆ ಹರಿಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ನಂತರ ಮಾನ್ಯ ಸಹಕಾರ ಸಚಿವರು ಇವೆಲ್ಲವುಗಳನ್ನು ಸರಿಪಡಿಸಲು ಕ್ರಮವಿಡುವುದಾಗಿ ತಿಳಿಸಿದರು. ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಸಂತೋಷ ವ್ಯಕ್ತ ಪಡಿಸಿದರು. ■

# ಇ-ಸ್ಟ್ಯಾಂಪಿಂಗ್ ಕೇಂದ್ರಗಳ ಸಮರ್ಪಕ ನಿರ್ವಹಣೆಗೆ ತರಬೇತಿ ಅಗತ್ಯ - ಹೆಚ್.ವಿ. ರಾಜೀವ್

ದಿ : 05.07.2013ರಂದು ಮೈಸೂರಿನಲ್ಲಿ ಸಂಯುಕ್ತ ಸಹಕಾರಿಯು ಇ-ಸ್ಟ್ಯಾಂಪಿಂಗ್ ಎಸಿಸಿ ಕೇಂದ್ರಗಳ ಸಿಬ್ಬಂದಿಯವರಿಗಾಗಿ ಹಮ್ಮಿಕೊಂಡಿದ್ದ ತರಬೇತಿಯನ್ನು ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರಾದ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಾಜೀವ್ ಉದ್ಘಾಟಿಸಿದರು.

ರಾಜ್ಯದಲ್ಲಿ ಒಟ್ಟಾರೆ 502 ಇಸ್ಟ್ಯಾಂಪಿಂಗ್ ಎಸಿಸಿ ಕೇಂದ್ರಗಳಿದ್ದು ಅವುಗಳು ಸಮಪರ್ಕವಾಗಿ ಕಾರ್ಯನಿರ್ವಹಿಸುವುದು ಅಗತ್ಯವಾಗಿರುವುದರಿಂದ ಸಾರ್ವಜನಿಕರಿಗೆ ಯಾವುದೇ ರೀತಿ ತೊಂದರೆ ಆಗದಂತೆ ಸೌಹಾರ್ದ ಸಹಕಾರಿಯ ಎಸಿಸಿ ಕೇಂದ್ರಗಳು ಕಾರ್ಯನಿರ್ವಹಿಸುವಂತಾಗಲಿ. ರಾಜ್ಯದಾದ್ಯಂತ 2013ನೇ ಸಾಲಿನಲ್ಲಿ 11 ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯು ಹಮ್ಮಿಕೊಂಡಿದೆ. ಕಾರ್ಯಕ್ರಮದಲ್ಲಿ ಸ್ಟಾಕ್



ಹೋಲ್ಡಿಂಗ್ ಕಾರ್ಪೋರೇಷನ್ ಅಧಿಕಾರಿ ಶ್ರೀ ಅನಿಲ್‌ಕುಮಾರ್, ಸಂಯುಕ್ತ ಸಹಕಾರಿಯ ಅಧಿಕಾರಿಗಳು ಭಾಗವಹಿಸಿದ್ದರು. ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಜಿಲ್ಲೆಗಳಿಂದ 26 ಎಸಿಸಿ ಕೇಂದ್ರಗಳಿಂದ 28 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.

## ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ

# 3 ದಿನಗಳ ವಿಷಯಾಧಾರಿತ ಅಲ್ಪಾವಧಿ ತರಬೇತಿ

ಜುಲೈ 18 ರಿಂದ 20ರವರೆಗೆ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ವಿಷಯಾಧಾರಿತ ಅಲ್ಪಾವಧಿ 3 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ತರಬೇತಿ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಎಲ್ಲಾ ಸಹಕಾರಿಗಳಿಗೂ ಈಗಾಗಲೇ ಪತ್ರ ಕಳುಹಿಸಲಾಗಿದೆ. ಕೇವಲ 60 ಜನರಿಗೆ ಮಾತ್ರ ಪ್ರವೇಶಕ್ಕೆ ಅವಕಾಶವಿದೆ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮಾತ್ರ ಭಾಗವಹಿಸಬೇಕು. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆಯಿದೆ. ಭಾಗವಹಿಸುವವರ ಸಂಖ್ಯೆ ನಿಗದಿತ ಸಂಖ್ಯೆಗಿಂತ ಹೆಚ್ಚಿಗೆ ಆದಲ್ಲಿ 2ನೇ ತಂಡವನ್ನು ನಡೆಸಲಾಗುವುದು. 2ನೇ ತಂಡದ ದಿನವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ವ್ಯವಸ್ಥೆಯ ದೃಷ್ಟಿಯಿಂದ ಪ್ರವೇಶ ಪತ್ರ ಅಥವಾ ಭಾಗವಹಿಸಲು ಸೂಚನೆ ಪಡೆಯದೆ ನೇರವಾಗಿ ತರಬೇತಿಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

**ವಿಷಯಗಳು** : ಸಾಲ ದಾಖಲೆಗಳ ನಿರ್ವಹಣೆ, ಸಾಲ ವಸೂಲಾತಿ ಕ್ರಮಗಳು ಆದಾಯ ತೆರಿಗೆ ಹಾಗೂ ಅನ್ವಯವಾಗುವ ಇತರೆ ಕಾಯ್ದೆಗಳು, ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು ಹಾಗೂ ಮಾನವ ಸಂಪನ್ಮೂಲ ವಿಷಯಗಳು. ಪ್ರವೇಶ ಶುಲ್ಕ ರೂ. 1000/– ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರ ಹೆಸರಿಗೆ ಡಿ.ಡಿ. ಮೂಲಕ ಕಳುಹಿಸುವುದು.

## 'ಇ' ಸ್ಟಾಂಪಿಂಗ್ ತರಬೇತಿ ಕಾರ್ಯಕ್ರಮಗಳು

ಮೈಸೂರು: 5–7–2013
ಬೆಂಗಳೂರು : 16,17–7–2013
ಆರ್.ಐ.ಸಿ.ಎಮ್., ಬೆಂಗಳೂರು.
ಉಡುಪಿ : 25–7–2013
ಶಿವಮೊಗ್ಗ : 26–7–2013

## ಪಟ್ಟಣ ಸಹಕಾರಿ ಬ್ಯಾಂಕುಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಹಾಗೂ ಹಿರಿಯ ಅಧಿಕಾರಿಗಳಿಗಾಗಿ 2 ದಿನಗಳ ತರಬೇತಿ ಕಾರ್ಯಕ್ರಮ

ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕುಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳಿಗಾಗಿ ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿಷಯಗಳು, ಕಾರ್ಪೋರೇಟ್ ಗವರ್ನನ್ಸ್, ರಿಸರ್ವ್ ಬ್ಯಾಂಕ್ ಸುತ್ತೋಲೆಗಳು, ಕ್ಯಾಮೆಲ್ ರೇಟಿಂಗ್ ಬ್ಯಾಂಕಿಂಗ್ ರೆಗ್ಯುಲೇಶನ್ ಕಾಯ್ದೆ ಹಾಗೂ ನೆಗೋಶಿ ಯೇಬಲ್ ಇನ್ಸ್ಟ್ರು ಮೆಂಟ್ ಕಾಯ್ದೆ, ಪೇಮೆಂಟ್ ಆಫ್ ಚೆಕ್ಸ್ ಹಾಗೂ ಗ್ರಾಹಕರ ಸೇವೆಗಳ ನಿರ್ವಹಣೆ ಕುರಿತು ಇದೇ ಆಗಸ್ಟ್ ಮಾಹೆಯಲ್ಲಿ ಬೆಂಗಳೂರಿನಲ್ಲಿ 2 ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು.

## ಸಂಯುಕ್ತ ಸಹಕಾರಿಯ ಜುಲೈ – ಆಗಸ್ಟ್‌ನ ತರಬೇತಿ ಕಾರ್ಯಕ್ರಮಗಳು

**ಉಪವಿಧಿಗಳ ತಿದ್ದುಪಡಿ, ಅಧಿಪ್ರೇರಣೆ ಹಾಗೂ ಗುಣಮಟ್ಟನಿರ್ವಹಣೆ ಕಾರ್ಯಾಗಾರಗಳು**

1. 6–7–2013 — ಮೈಸೂರು (ಮೈಸೂರು ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ ಪತ್ತಿನ ಸಹಕಾರಿ ಸಂಘಗಳಿಗಾಗಿ)
2. 15–7–2013 — ಬಾಗಲಕೋಟೆ ಜಿಲ್ಲೆಯ ಪತ್ತಿನ ಸಹಕಾರ ಸಂಸ್ಥೆಗಳಿಗಾಗಿ
3. 16–7–2013 — ಬಿಜಾಪುರ ಜಿಲ್ಲೆಯ ಪತ್ತಿನ ಸಹಕಾರ ಸಂಸ್ಥೆಗಳಿಗಾಗಿ
4. 26–7–2013 — ಬಳ್ಳಾರಿ ಜಿಲ್ಲೆಯ ಪತ್ತಿನ ಸಹಕಾರ ಸಂಸ್ಥೆಗಳಿಗಾಗಿ (ಹೊಸಪೇಟೆ)
5. 27–7–2013 — ರಾಯಚೂರು ಜಿಲ್ಲೆಯ ಪತ್ತಿನ ಸಹಕಾರ ಸಂಸ್ಥೆಗಳಿಗಾಗಿ
6. 27–7–2013 — ಶಿವಮೊಗ್ಗ ಜಿಲ್ಲೆಯ ಪತ್ತಿನ ಸಹಕಾರ ಸಂಸ್ಥೆಗಳಿಗಾಗಿ

## ಸೌಹಾರ್ದ ಸಹಕಾರಿಗಳ ವಿಶೇಷ ಗಮನಕ್ಕಾಗಿ

ಸೌಹಾರ್ದ ಸಹಕಾರಿಗಳ ಶಕ್ತಿಸಾಮರ್ಥ್ಯ, ದೌರ್ಬಲ್ಯ, ಅವಕಾಶಗಳು ಹಾಗೂ ಸವಾಲುಗಳ ಅಧ್ಯಯನ ಕಾರ್ಯಕ್ರಮ (Swot analysis programme) ಸಂಯುಕ್ತ ಸಹಕಾರಿಯ ವತಿಯಿಂದ ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯನ್ನು ಅಧ್ಯಯನ ಮಾಡಿ ಸಹಕಾರಿಗಳ ಶಕ್ತಿ ಸಾಮರ್ಥ, ದೌರ್ಬಲ್ಯಗಳು,ಅವಕಾಶಗಳು ಹಾಗೂ ಸವಾಲುಗಳ ಬಗ್ಗೆ ಅಧ್ಯಯನ ಮಾಡಿ ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯನ್ನು ಉತ್ತಮಗೊಳಿಸುವ ದೃಷ್ಟಿಯಿಂದ ನುರಿತ ಸಹಕಾರಿ ತಜ್ಞರಿಂದ ಈ ಕಾರ್ಯವನ್ನು ಮಾಡಿಸಲು ತಿರ್ಮಾನಿಸಿದೆ. ಈ ಕಾರ್ಯದಲ್ಲಿ ಆಸಕ್ತಿಯಿರುವ ಸಹ ಕಾರಿಗಳು ಸಂಯುಕ್ತ ಸಹಕಾರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದಲ್ಲಿ ಹಿರಿಯ ಸಹಕಾರಿ ತಜ್ಞರನ್ನು ಅಧ್ಯಯನಕ್ಕಾಗಿ ಕಳುಹಿಸಲುಕ್ರಮ ವಿಡಲಾಗುವುದು. ಅಧ್ಯಯನ ವೆಚ್ಚವನ್ನು ಸಂಬಂಧಿಸಿದ ಸಹಕಾರಿಗಳು ಭರಿಸಬೇಕಾಗುತ್ತದೆ.

### ಕರ್ನಾಟಕ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಜಾರಿಗೊಳಿಸಿದ

# ಮಾಜಿ ಸಹಕಾರ ಸಚಿವ ಶ್ರೀ ಎಸ್.ಎಸ್.ಪಾಟೀಲ್‌ರು ಸಂಯುಕ್ತ ಸಹಕಾರಿಗೆ ಭೇಟಿ

ಕರ್ನಾಟಕ ರಾಜ್ಯದಲ್ಲಿ ಸನ್ಮಾನ್ಯ ದಿ. ಜೆ.ಹೆಚ್. ಪಟೇಲ್ ನೇತೃತ್ವದ ಸರ್ಕಾರದಲ್ಲಿ ಸಹಕಾರ ಮಂತ್ರಿಗಳಾಗಿ ಉತ್ತಮ ಸಹಕಾರಿ ಮಂತ್ರಿ ಎಂದು ಹೆಸರು ಪಡೆದು, 1998ರಲ್ಲಿ ಸಹಕಾರಿ ಸಂಘಗಳ ಕಾಯ್ದೆಗೆ ಅನೇಕ ತಿದ್ದುಪಡಿಗಳನ್ನು ಜಾರಿಗೊಳಿಸಿ, ಸಹಕಾರ ಕ್ಷೇತ್ರಕ್ಕೆ ಹೊಸ ದಿಕ್ಸೂಚಿಯನ್ನು ತೋರಿಸಿದ ಕೀರ್ತಿ ಶ್ರೀ ಎಸ್.ಎಸ್. ಪಾಟೀಲರದು.

ಕೇಂದ್ರ ಯೋಜನಾ ಆಯೋಗದ ಸಿಫಾರಸ್ಸು ಮೇರೆಗೆ ಮಾದರಿ ಸಹಕಾರಿ ಕಾಯ್ದೆಯನ್ನು ಜಾರಿಗೊಳಿಸುವ ಉದ್ದೇಶ ಹೊಂದಿದ್ದ ಶ್ರೀ ಪಾಟೀಲರು, ಸಹಕಾರಿಗಳಿಗೆ ಹೆಚ್ಚಿನ ಸ್ವಾಯತ್ತತೆಯನ್ನು ನೀಡಬೇಕು; ಸಹಕಾರಿ ಸಂಸ್ಥೆಗಳ ಆಡಳಿತದಲ್ಲಿ ಸರ್ಕಾರದ ಕನಿಷ್ಠ ಪಾತ್ರವಿರಬೇಕು ಎಂಬ ಉದಾತ್ತ ಧ್ಯೇಯಗಳನ್ನು ಹೊಂದಿದ್ದರು.

ಅಂದಿನ ಮುಖ್ಯಮಂತ್ರಿ ಶ್ರೀ ಜೆ.ಹೆಚ್.ಪಟೇಲ್‌ರ ಸಂಪೂರ್ಣ ಬೆಂಬಲ ಪಡೆದ ಶ್ರೀ ಎಸ್.ಎಸ್. ಪಾಟೀಲರು, ರಾಜ್ಯ ವಿಧಾನ ಸಭೆಯಲ್ಲಿ 1997ರಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಮಂಡಿಸಿ ಅನುಮೋದನೆ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ನಂತರ ಬಂದ ಈ ಕಾಯ್ದೆಯ ಜಾರಿಗೆ ಕೆಲವು ವಿರೋಧಗಳಿದ್ದಾಗ್ಯೂ ಸಹಕಾರಿ ಕ್ಷೇತ್ರಕ್ಕೆ ಹೊಸ ಆಯಾಮವನ್ನು ನೀಡಬೇಕು ಎಂಬ ದೃಢ ಸಂಕಲ್ಪದಿಂದ 2001 ಜನವರಿಯಿಂದ ಈ ಕಾಯ್ದೆ ಜಾರಿಗೆ ಬರುವಂತೆ ಅವರನ್ನು ಮನವಲಿಸುವಲ್ಲಿ ಮತ್ತು ಕಾಯ್ದೆ ಜಾರಿಯಾಗುವಲ್ಲಿ ಯಶಸ್ವಿಯಾದವರು.

ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಹೆಚ್ಚಿನ ಕಾಳಜಿ ಇರುವ ಶ್ರೀಯುತರು ದಿ : 2-7-2013ರಂದು ಸಂಯುಕ್ತ ಸಹಕಾರಿಯ ಕಚೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ, ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರ, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ ಹಾಗೂ ಅಧಿಕಾರಿಗಳು ಪ್ರೀತಿ ಪೂರ್ವಕವಾಗಿ ಬರಮಾಡಿಕೊಂಡರು. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು, ಸಂಯುಕ್ತ ಸಹಕಾರಿಯ ಶಾಸನ ಬದ್ಧ ಕಾರ್ಯಗಳು, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು ಹಾಗೂ ಪ್ರಚಾರಗಳನ್ನು ಪರೀಕ್ಷಿಸಿದ ಶ್ರೀ ಎಸ್.ಎಸ್.ಪಾಟೀಲರು, ಸಂಯುಕ್ತ ಸಹಕಾರಿಯು ಸಿದ್ಧಪಡಿಸಿದ ಸಾಕ್ಷ್ಯ ಚಿತ್ರವನ್ನು ವೀಕ್ಷಿಸಿದರು. ಮುಂಬರುವ ದಿನಗಳಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಮಾರ್ಗದರ್ಶನ ನೀಡಿದರು. ಇತ್ತೀಚಿನ 97ನೇ ಸಂವಿಧಾನ ತಿದ್ದುಪಡಿ, ರಾಜ್ಯದ ಎರಡು ಕಾಯ್ದೆಗಳ ತಿದ್ದುಪಡಿ ವಿಶೇಷವಾಗಿ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಗಳ ಬಗ್ಗೆ ಚರ್ಚಿಸಿ, ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಕೊಡುವಾಗ ಹಲವು ಸಹಕಾರಿ ಮುಖಂಡರು ಅಧಿಕಾರಿಗಳು ನೀಡಿದ ಸಹಕಾರವನ್ನು ಅವರು ಮಾಡಿದ ಕಾರ್ಯಗಳನ್ನು ಸ್ಮರಿಸಿದರು. ಅಲ್ಲದೇ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು.



ಈ ಕ್ಷೇತ್ರ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಬೇಕು. ಹಳೆಯ ಕಾಯ್ದೆಯಲ್ಲಿಯ ಹೆಚ್ಚಿನ ಸಹಕಾರಿ ಸಂಸ್ಥೆಗಳು ಈ ಕಾಯ್ದೆಯಡಿಯಲ್ಲಿ ಬರುವಂತೆ ಸಂಯುಕ್ತ ಸಹಕಾರಿಯು ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಪ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಯಬೇಕು. ಹೊಸ ಹೊಸ ಕಾರ್ಯವಿಧಾನಗಳ ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವಂತೆ ಪ್ರೇರೇಪಣಾ ಕಾರ್ಯದಲ್ಲಿ ಕಾರ್ಯನಿರತರಾಗಬೇಕು ಎಂದು ಸಲಹೆ ನೀಡುವುದರ ಜೊತೆಗೆ ಈ ಕ್ಷೇತ್ರಕ್ಕೆ ಹೆಚ್ಚು ಮಹಿಳೆಯರು ಹಾಗೂ ಯುವಕರನ್ನು ಬರಮಾಡಿಕೊಳ್ಳುವ ಪ್ರಯತ್ನವಾಗಬೇಕು ಎಂದು ತಿಳಿಸಿದರು.

"ಶೋಷಣಾ ರಹಿತ ಮಹಿಳಾ ಸಮಾಜದ" ನಿರ್ಮಾಣ ಇಂದಿನ ಅಗತ್ಯತೆ. ಮಹಿಳೆಯರ ಮೇಲೆ ದೌರ್ಜನ್ಯಗಳು ಆಗದಂತೆ ತಡೆಯುವ ನಿಟ್ಟಿನಲ್ಲಿ ಕ್ರಮವಿಡಬೇಕು. ಕುಡಿತದ ದೌರ್ಬಲ್ಯ ಕುಟುಂಬವನ್ನೇ ನಾಶಮಾಡುತ್ತದೆ. ಸಮಾಜವನ್ನು ಈ ವ್ಯಾಧಿಯಿಂದ ರಕ್ಷಣೆ ಮಾಡುವಂತಹ ಕುಡಿತವನ್ನು ಬಿಡಿಸುವ ಆಂದೋಲನವನ್ನು ಈ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಅಧಿಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರತಿಯೊಬ್ಬರು ತೊಡಗಿಸಿಕೊಳ್ಳಬೇಕು. ಇದು ಆದ್ಯತಾವಲಯವಾಗಬೇಕು. ಆಗ ಮಾತ್ರ ಬಸವಣ್ಣ ಹಾಗೂ ಮಹಾತ್ಮ ಗಾಂಧೀಜಿಯವರು ಕಂಡ ಕನಸು ಸಾಕಾರಗೊಳ್ಳಲು ಹಾಗೂ "ಸ್ವಾಸ್ಥ ಸಮಾಜ ರಚನೆ" ಸಾಧ್ಯ ಎಂದು ತಿಳಿಸಿದರು.

ಸೌಹಾರ್ದ ಸಹಕಾರಿಗಳು ಅನುಭವ ಮಂಟಪದ ಮಾದರಿಯಲ್ಲಿ ಕಾರ್ಯ ನಿರ್ವಹಿಸಬೇಕೆಂದು ಕರೆಯಿತ್ತರು. ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ ಮಾತನಾಡಿ, ರಾಜ್ಯದಲ್ಲಿ ಶ್ರೀ ಎಸ್.ಎಸ್.ಪಾಟೀಲ್‌ರ ಪ್ರಯತ್ನದಿಂದ ಸಹಕಾರಿ ಕ್ಷೇತ್ರದಲ್ಲಿ ಹೊಸ ಶಕೆ ಆರಂಭವಾಗಿದೆ. 2480ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುವಂತಾಗಿದ್ದು, ಸಮಗ್ರ ಸೌಹಾರ್ದ ಸಹಕಾರಿ ಕ್ಷೇತ್ರ ಶ್ರೀ ಪಾಟೀಲ್ ಅವರಿಗೆ ಋಣಿಯಾಗಿದೆ. ಅವರ ಚಿಂತನೆಗಳನ್ನು,

ಕನಸುಗಳನ್ನು ಸಾಕಾರಮಾಡುವ ಜವಾಬ್ದಾರಿ ಸೌಹಾರ್ದ ಸಹಕಾರಿಗಳ ಮೇಲೆ ಇದೆ. ಅದನ್ನು ಅವರು ಅತ್ಯಂತ ದಕ್ಷತೆಯಿಂದ ಪೂರ್ಣಗೊಳಿಸುವ ಭರವಸೆಯಿದೆ ಎಂದು ತಿಳಿಸಿ ಶ್ರಿಯುತರಿಗೆ ಸಂಯುಕ್ತ ಸಹಕಾರಿಯ ಪರವಾಗಿ ಹಾಗೂ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ವಂದನಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಸಲ್ಲಿಸಿದರು. ಸಂಯುಕ್ತ ಸಹಕಾರಿ ಸಿಬ್ಬಂದಿ ಹಾಗೂ ಇತರರು ಹಾಜರಿದ್ದರು. ■

# ಸೌಹಾರ್ದ ಸಹಕಾರಿಗಳ ಸದಸ್ಯರ ತರಬೇತಿ ಕಾರ್ಯಕ್ರಮ ಹಾಗೂ ಕ್ರೆಡಿಟ್ ಸಹಕಾರ ಸಂಘಗಳ ಉಪವಿಧಿಗಳ ತಿದ್ದುಪಡಿ ಗುಣಮಟ್ಟ ನಿರ್ವಹಣೆ ಕಾರ್ಯಾಗಾರಗಳ ಉದ್ಘಾಟನೆ






ಸಹಕಾರಿ ಕ್ಷೇತ್ರದ ಅತ್ಯಂತ ವಿಶಾಲವಾಗಿ ಬೆಳೆದಿದ್ದು, ಇದರ ಮೂಲಕ ಜನಸಾಮಾನ್ಯರಿಗೆ ಅನೇಕ ಸೌಲಭ್ಯಗಳು ಸಿಗುತ್ತಿವೆ. ಇದನ್ನು ಮತ್ತಷ್ಟು ಬಲಿಷ್ಠವಾಗಿ ಬೆಳೆಸುವುದು ಅತ್ಯಂತ ಅಗತ್ಯವಾಗಿದೆ ಎಂದು ಮೈಸೂರು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀ ಸಿ.ಕೆ. ಮಹೇಂದ್ರ ಅಭಿಪ್ರಾಯಿಸಿದರು.

ದಿ : 06.07.2013 ರಂದು ಅಂತರರಾಷ್ಟ್ರೀಯ ಸಹಕಾರಿ ದಿನವನ್ನಾಗಿ ಆಚರಿಸಬೇಕೆಂಬ ಕರೆಗೆ ಅನುಗುಣವಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಮೈಸೂರಿನ ಸೌಹಾರ್ದ ಸಹಕಾರಿಗಳ ಸದಸ್ಯರಿಗೆ ಸದಸ್ಯ ತರಬೇತಿ ಕಾರ್ಯಕ್ರಮ ಹಾಗೂ ಮೈಸೂರು, ಮಂಡ್ಯ, ಚಾಮರಾಜ ನಗರ, ಕೊಡಗು ಜಿಲ್ಲೆಗಳ ಕ್ರೆಡಿಟ್ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಉಪವಿಧಿಗಳ ತಿದ್ದುಪಡಿ, ಅಭಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಿರುವ ಅಧ್ಯಕ್ಷರು, ನಿರ್ದೇಶಕರು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಜೊತೆಗೆ ಸದಸ್ಯರುಗಳಿಗೆ ತರಬೇತಿ ನೀಡುತ್ತಿರುವುದು ಅತ್ಯಂತ ಮಹತ್ವದ್ದಾಗಿದೆ. ಈ ಕಾರ್ಯವನ್ನು ಪ್ರಾರಂಭಿಸಿರುವ ಸಂಯುಕ್ತ ಸಹಕಾರಿಯ ಕಾರ್ಯ ಶ್ಲಾಘನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್‌ಚಂದ್ರ, ರಾಜ್ಯದ ಸೌಹಾರ್ದ ಸಹಕಾರಿಗಳು ಸಹಕಾರಿ ಚಳುವಳಿಯ ಬೆಳವಣಿಗೆ ವಿವರಗಳನ್ನು ನೀಡುತ್ತಾ ಈ ಕ್ಷೇತ್ರದ ಅಭಿವೃದ್ಧಿಯಲ್ಲಿ ಸದಸ್ಯರು ಸಕ್ರೀಯವಾಗಿ ಪಾಲ್ಗೊಳ್ಳಬೇಕಿರುವುದರಿಂದ ಅವರಿಗಾಗಿ ರಾಜ್ಯದಾದ್ಯಂತ್ಯ ತರಬೇತಿ ಅಭಿಯಾನವನ್ನು ಪ್ರಸ್ತುತ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿದೆ. ಮೈಸೂರು ನಗರ ಸೌಹಾರ್ದ ಸಹಕಾರಿಗಳ ಸದಸ್ಯರ ತರಬೇತಿ ಕಾರ್ಯಕ್ರಮದ ಉದ್ಘಾಟನೆ ಈ ಅಭಿಯಾನಕ್ಕೆ ಚಾಲನೆ ನೀಡಿದೆ ಎಂದರು.

ಕಾರ್ಯಕ್ರಮದಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಹೆಚ್.ವಿ.ಜೋಷಿ ಮಾತನಾಡಿ, ರಾಜ್ಯ ಸೌಹಾರ್ದ ಸಹಕಾರಿ ಚಳುವಳಿಯ ಪ್ರಗತಿಗೆ ಪೂರಕವಾದ ಯಾವುದೇ ಕೆಲಸವಿದ್ದರೂ ಸಹಕಾರಿ ಇಲಾಖೆ ನಿಷ್ಠೆಯಿಂದ ನಿರ್ವಹಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್‌ನಲ್ಲಿ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್, ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಉಪಾಧ್ಯಕ್ಷರಾದ ಶ್ರೀ ಮಹದೇವ್‌ಸ್ವಾಮಿ, ಸಂಯುಕ್ತ ಸಹಕಾರಿಯ ಚಾಮರಾಜನಗರ ಜಿಲ್ಲಾ ನಿರ್ದೇಶಕರಾದ ಶ್ರೀ ದಿನೇಶ್ ಗುಪ್ತ, ಹಿರಿಯ ಮಹಿಳಾ ಸಹಕಾರಿ ಶ್ರೀಮತಿ ರತ್ನ ಅರಸ್, ಮೈಸೂರು ಸಹಕಾರಿ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಶ್ರೀ ಎಲ್.ಸ್ವಾಮಿಗೌಡ ಮುಂತಾದವರು ವೇದಿಕೆಯಲ್ಲಿ ಇದ್ದರು.

ಬೆಳಗಿನ ಉಪವಿಧಿ ತಿದ್ದುಪಡಿ ಕಾರ್ಯಾಗಾರವನ್ನು ಸಹಕಾರಿ ಸಂಘಗಳ ಅಪರ ನಿಬಂಧಕರು (ನಿ) ಶ್ರೀ ಸಿ.ಎನ್.ಪರಶಿವಮೂರ್ತಿಯವರು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ 30 ಸಹಕಾರಿ ಸಂಘಗಳಿಂದ 40 ಜನ ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದಿರುತ್ತಾರೆ.

ಮಧ್ಯಾಹ್ನದ ಸದಸ್ಯ ತರಬೇತಿ ಕಾರ್ಯಕ್ರಮವನ್ನು ಸಹಕಾರ ಸಂಘಗಳ ಅಪರ ನಿಬಂಧಕರು (ನಿ) ಶ್ರೀ ಬಿ.ಎ. ಮಹದೇವಪ್ಪ ಅವರು "ಸಹಕಾರಿ ಸಂಸ್ಥೆಗಳ ಗುಣಮಟ್ಟ ನಿರ್ವಹಣೆಯಲ್ಲಿ ಸದಸ್ಯರ ಪಾತ್ರ" ಬಗ್ಗೆ ಉಪನ್ಯಾಸ ನೀಡಿದರು. ಇದರಲ್ಲಿ 50 ಜನ ಸದಸ್ಯರು ಭಾಗವಹಿಸಿ ಪ್ರಯೋಜನ ಪಡೆದರು. ■



ಇತ್ತೀಚೆಗೆ ಸಂಯುಕ್ತ ಸಹಕಾರಿ ಪದಾಧಿಕಾರಿಗಳು ರಾಜ್ಯದ ಅಬಕಾರಿ ಸಚಿವ ಶ್ರೀ ಸತೀಶ್ ಜಾರಕಿ ಹೊಳಿಯವರನ್ನು ಭೇಟಿ ನೀಡಿದ್ದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್‌ಚಂದ್ರ, ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಬೆಳಗಾವಿಯ ಶ್ರೀ ಶ್ರೀಕಾಂತ ಅತನೂರೆ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ಇತರ ಗಣ್ಯರು ಹಾಜರಿದ್ದರು.

# ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ

**ಉ.ಕನ್ನಡ :** ಪ್ರತಿಯೊಬ್ಬ ಸಿಬ್ಬಂದಿಗೆ ಅವರ ದಿನವಹಿ ನಿರ್ವಹಿಸುತ್ತಿರುವ ಕಾರ್ಯದ ಪರಿಣಿತಿ ಅಥವಾ ಕೌಶಲ್ಯವನ್ನು ಆಗಿಂದಾಗ್ಗೆ ಹೆಚ್ಚಿಸಿಕೊಳ್ಳಬೇಕಾದುದು ಅವಶ್ಯಕವಾಗಿದ್ದು, ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಕಾರ್ಯ ಅಭಿನಂದನಾರ್ಹ ಎಂದು ಮಂಗಳೂರಿನ ಅಭಿಯಾನ ತರಬೇತಿ ಸಂಸ್ಥೆಯ ಶ್ರೀ ಶಿಕಾರಿಪುರ ಕೃಷ್ಣಮೂರ್ತಿಯವರು ಶ್ಲಾಘಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗಾಗಿ ಯಲ್ಲಾಪುರದ ಸ್ನೇಹಸಾಗರ ಆಂಗ್ಲ ಮಾಧ್ಯಮ ವಸತಿ ಶಾಲೆಯಲ್ಲಿ ವ್ಯಕ್ತಿತ್ವ ವಿಕಸ ಹಾಗೂ ವೃತ್ತಿ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಂತರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರ, ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ನೇತಾರನಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಯ ಜವಾಬ್ದಾರಿ ಮಹತ್ವದ್ದಾಗಿದೆ ಎಂದರು.

ಸಂಯುಕ್ತ ಸಹಕಾರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಲ್ಲ ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ವಕ್ತಾರರಾಗಿ ಕಾರ್ಯನಿರ್ವಹಿಸುವುದು ಅವಶ್ಯಕ; ಆದ್ದರಿಂದ ಈ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲಾ ಕೆಲಸಗಳ ಬಗ್ಗೆ ಮಾಹಿತಿ ಹೊಂದುವುದರ



ಜೊತೆಗೆ ನಮ್ಮ ಕಾರ್ಯವಿಧಾನದ ಚುರುಕಾಗಿ ರಬೇಕು. ಸೌಹಾರ್ದ ಸಹಕಾರಿಗಳ ಆಶಯಗಳಿಗೆ ಸಕಾರಾತ್ಮಕ ಮನೋಭಾವದಿಂದ ಸ್ಪಂದಿಸುವ ಪ್ರವೃತ್ತಿಯನ್ನು ರೂಢಿಸಿಕೊಳ್ಳವ ಕರ್ತವ್ಯ ನಮ್ಮದಾಗಿದೆ. ಈ ನಿಟ್ಟಿನಲ್ಲಿ ಈ ತರಬೇತಿ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ರವರು ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕ ವಾಗಿ ಮಾತನಾಡುತ್ತ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಸಂಯುಕ್ತ ಸಹಕಾರಿಯ ಸಿಬ್ಬಂದಿಯವರನ್ನು ಆಗಿಂದಾಗೆ ತರಬೇತಿ ಗೊಳಿಸುವುದರ ಮೂಲಕ ಸಂಯುಕ್ತ ಸಹಕಾರಿಯ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಕ್ರಮವಿಡುತ್ತಿರುವುದು ಅತ್ಯಂತ ಉತ್ತಮ ಹಾಗೂ ಸ್ವಾಗತಾರ್ಹ ಎಂದು ತಿಳಿಸಿ ಎಲ್ಲ ಸಿಬ್ಬಂದಿ ಯವರು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳಲು ಸಲಹೆ ನೀಡಿದರು.


ಶಿಬಿರಾರ್ಥಿಗಳಿಗೆ ಶ್ರೀ ಶಿಕಾರಿಪುರ ಕೃಷ್ಣಮೂರ್ತಿಯವರು ಆತ್ಮಾವಲೋಕನ, ನನ್ನತನ, ಯೌಗಿಕ ಆರೋಗ್ಯ, ಶಾರೀರಿಕ ಕ್ಷಮತೆ ಮನಸ್ಸು ಮತ್ತು ಬುದ್ಧಿ ಜಾಗ್ರತೆಗಾಗಿ ಬುದ್ಧಿ ಭಾವ ವಿಕಾಸ ಪರರೊಡನೆ ಬೆರೆಯುವ ಸಾಮರ್ಥ್ಯ, ಪ್ರಶಿಕ್ಷಣ ಹಾಗೂ ನಾನು ನನ್ನ ಜೀವನದ ಉದ್ದಿಷ್ಟ ಸಾಧನೆಗಳು, ನನ್ನಲ್ಲಿಯ ನಾಯಕತ್ವ, ಶಿಸ್ತು, ವ್ಯಕ್ತಿಗತ ಸಾಧನೆಗಳು ಗುಂಪುಗತ ಸಾಧನೆಗಳು, ಮುಂತಾದ ವಿಷಯಗಳನ್ನು ಉದಾಹರಣೆ ಹಾಗೂ ಪ್ರಾಯೋಗಿಕವಾಗಿ ತಿಳಿಸಿಕೊಟ್ಟರು. ಶಿಬಿರ ಅತ್ಯುತ್ತಮವಾಗಿತ್ತೆಂದು ಶಿಬಿರಾರ್ಥಿಗಳು ಅಭಿಪ್ರಾಯ ವ್ಯಕ್ತಪಡಿಸಿದರು. ಕೊನೆಯಲ್ಲಿ ಕೂರ್ಮಾವತಾರ ಎಂಬ ಚಲನ ಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಶ್ರೀ ಭಾಸ್ಕರ್ ಹೆಗಡೆ ಕಾಗೇರಿ ಸೇರಿದಂತೆ ಇತರರು ಭಾಗವಹಿಸಿದ್ದರು.

# ಸಹಕಾರಿ ಕಾಯ್ದೆಯ ದೋಷಗಳ ನಿವಾರಣೆಗೆ ಹಾಗೂ ಸೌಹಾರ್ದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದ ಪೂರ್ಣ ಸಹಕಾರ : ಶಾಸಕ ಶ್ರೀ ಶಿವರಾಮ ಹೆಬ್ಬಾರ

ಇತ್ತೀಚೆಗೆ ರಾಜ್ಯದ ಎರಡು ಸಹಕಾರಿ ಕಾಯ್ದೆಗಳ ತಿದ್ದುಪಡಿ ಸಂದರ್ಭದಲ್ಲಿ ಕೆಲವು ಗೊಂದಲಗಳಾಗಿವೆ. ಈ ಗೊಂದಲಗಳನ್ನು ನಿವಾರಿಸಲು ಈ ಸಹಕಾರಿ ಕಾಯ್ದೆಗಳಿಗೆ ಸಮಗ್ರ ತಿದ್ದುಪಡಿಗಳನ್ನು ತರಲು ಸರ್ಕಾರ ಚಿಂತನೆ ನಡೆಸಿದೆ ಎಂದು ಯಲ್ಲಾಪುರದ ಶಾಸಕ ಶ್ರೀ ಶಿವರಾಮ ಹೆಬ್ಬಾರ ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಸ್ನೇಹಸಾಗರ ಆಂಗ್ಲ ಮಾಧ್ಯಮ ವಸತಿ ಶಾಲೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಮೇ 30 ರಿಂದ ಜೂನ್ 8ರವರೆಗೆ ನಡೆದ ವ್ಯಕ್ತಿತ್ವ ವಿಕಸನ ತರಬೇತಿಯ ಸಮಾರೋಪ ಭಾಷಣ ಮಾಡಿದ ಅವರು, ಈಗಾಗಲೇ ಮಾನ್ಯ ಪಾಟೀಲರ ಅಧ್ಯಕ್ಷತೆಯಲ್ಲಿ 14 ಜನರ ಸಮಿತಿಯೊಂದು ಚರ್ಚೆ ನಡೆಸುತ್ತಿದ್ದು, ಗೊಂದಲಗಳ ಬಗ್ಗೆ ಸಹಕಾರಿಗಳು ಚಿಂತಿಸುವ ಅಗತ್ಯವಿಲ್ಲ ಎಂದರು.



ಸಹಕಾರಿ ಸಂಸ್ಥೆಗಳ ಸ್ವಾಯತ್ತತೆಯನ್ನು ಮೊಟಕುಗೊಳಿಸುವ ಯಾವುದೇ ಕ್ರಮವನ್ನು ಸರ್ಕಾರ ಮಾಡುವುದಿಲ್ಲ ಎಂದ ಅವರು, ಉತ್ತರ ಕನ್ನಡ ಜಿಲ್ಲೆ ಸಹಕಾರಿ ಕ್ಷೇತ್ರದಲ್ಲಿ ಉತ್ತಮ ಸಾಧನೆಯನ್ನು ಮಾಡಿದೆ. ನಮ್ಮ ಹಿರಿಯರಾದ ದಿವಂಗತ ಶ್ರೀಪಾದ ಹೆಗಡೆ ಕಡವೆ ಶ್ರೀ ಅಜ್ಜಿಬಾಳ ಹೆಗಡೆಯವರಂತಹ ಸಹಕಾರಿಗಳು ಉತ್ತಮ ಅಡಿಪಾಯ ಹಾಕಿಕೊಟ್ಟಿದ್ದನ್ನು ಸ್ಮರಿಸಿದರು.

ಉತ್ತಮ ಸಹಕಾರಿ ಸಂಸ್ಥೆಗಳು ಈ ಜಿಲ್ಲೆಯಲ್ಲಿದ್ದು, ಅಧ್ಯಯನ ಯೋಗ್ಯ ಹಾಗೂ ಅನುಕರಣೀಯವಾಗಿವೆ, ಈ ಜಿಲ್ಲೆಯಲ್ಲಿ ಸಂಯುಕ್ತ ಸಹಕಾರಿಯವರು 10 ದಿನಗಳ ತರಬೇತಿ ಕಾರ್ಯಕ್ರಮ ನಡೆಸಿರುವುದು ಸಂತಸದ ವಿಷಯ ಎಂದು ತಿಳಿಸಿ ಶಿಬಿರಾರ್ಥಿಗಳು ಈ ತರಬೇತಿಯ ಪೂರ್ಣ ಪ್ರಯೋಜನ ಪಡೆದು ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕು ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ, ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ವೇಗವಾಗಿ ಸಾಗುತ್ತಲಿದೆ.ರಾಜ್ಯದಲ್ಲಿ ಇದುವರೆಗೆ 2400 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೊಂದಣಿಯಾಗಿ ಕಾರ್ಯನಿರ್ವಹಿಸುತ್ತಿವೆ. ಸದಸ್ಯರಿಗೆ ಉತ್ತಮ ಸೇವೆ ಸಲ್ಲಿಸುತ್ತಿವೆ. ಉತ್ತಮ ಸಹಕಾರಿ ಸಂಸ್ಥೆಗಳು ಈ ಕ್ಷೇತ್ರದಲ್ಲಿವೆ. ಈ ಸೌಹಾರ್ದ ಸಹಕಾರಿ ಕ್ಷೇತ್ರ ರಾಜ್ಯದ ಸಹಕಾರಿ ಕ್ಷೇತ್ರದ ಕಾರ್ಯಆಚರಣೆಯಲ್ಲಿ ಹೊಸ ಅಧ್ಯಾಯವನ್ನು ಬರೆಯುತ್ತಲಿದೆ. 1959ರ ಕಾಯ್ದೆಯಲ್ಲಿನ ಸಹಕಾರಿ ಸಂಸ್ಥೆಗಳೂ ಸಹ ಸೌಹಾರ್ದ ಸಹಕಾರಿ ಸಂಸ್ಥೆಗಳ ಕಾರ್ಯವೈಖರಿಯಿಂದ ಹೊಸ ಚೈತನ್ಯವನ್ನು ಪಡೆಯುತ್ತಲಿದ್ದಾರೆ. ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಂಯುಕ್ತ ಸಹಕಾರಿಯ ರಚನೆ ಹಾಗೂ ಕಾರ್ಯಆಚರಣೆ ದೇಶದಲ್ಲಿಯೆ ಮಾದರಿಯಾಗಿದೆ. ನಮ್ಮ ರಾಜ್ಯಕ್ಕೆ ಹೆಮ್ಮೆಯ ವಿಷಯ. ಆದರೆ ಇತ್ತೀಚಿನ ಕಾಯ್ದೆ ತಿದ್ದುಪಡಿಯಿಂದಾಗಿ ಸೌಹಾರ್ದ ಸಹಕಾರಿಗಳ ಸ್ವಾಯತ್ತತೆಗೆ ಕಾರ್ಯಾಚರಣೆಗೆ ಕೆಲವು ಆತಂಕಗಳು ನಿರ್ಮಾಣವಾಗಿವೆ. ಸರಕಾರ ಅವುಗಳ ನಿವಾರಣೆಗೆ ಶೀಘ್ರ ಕ್ರಮವಿಡಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಅಂಬಿಕಾ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಡಿ.ಎನ್.ನಾಯಕ, ದ್ವಾರಕಾ ಸೌಹಾರ್ದ ಸಹಕಾರಿ ಅಧ್ಯಕ್ಷ ಶ್ರೀ ಆರ್.ಎನ್.ನಾಯಕ, ಸ್ನೇಹಸಾಗರ ಶಾಲೆಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಎಸ್.ಎಲ್.ಭಟ್ ರವರುಗಳು ಮಾತನಾಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಸ್ವಾಗತ ಕೋರಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ರವರು ಪ್ರಾಸ್ತಾವಿಕ ಭಾಷಣ ಮಾಡಿದರು.

ಪ್ರಾರ್ಥನೆಯನ್ನು ಶಿಬಿರಾರ್ಥಿ ಶ್ರೀಮತಿ ರೇಣುಕಾ ಹಾಗೂ ವೃಂದವರು ನೆರವೇರಿಸಿದರು. ಸಾಮೂಹಿಕವಾಗಿ ಸಹಕಾರ ಗೀತೆಯ ನಂತರ ಶಿಬಿರಾರ್ಥಿಗಳ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ತರಬೇತಿ ಅಧಿಕಾರಿ ಶ್ರೀ ವಿ.ಜೆ.ಕಾರಕೂನರವರು ಶಿಬಿರದ ವರದಿಯನ್ನು ಪ್ರಸ್ತುತ ಪಡಿಸಿದರು. ಶಿಬಿರದಲ್ಲಿ ರಾಜ್ಯದ 16 ಜಿಲ್ಲೆಗಳ 45 ಸೌಹಾರ್ದ ಸಹಕಾರಿಗಳ 54 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು. ಕಾರ್ಯಕ್ರಮದಲ್ಲಿ ಉತ್ತಮ ಶಿಬಿರಾರ್ಥಿಯಾಗಿ ಶ್ರೀ ಬಸವರಾಜ ಕದಂ, ಎಲ್ಲ 4 ತಂಡಗಳಿಗೆ ಉತ್ತಮ ತಂಡಗಳೆಂದು,ಉತ್ತಮ ಪ್ರಾರ್ಥನೆಗಾಗಿ ಸಂಜೂತಾ ತಂಡದವರಿಗೆ, ಉತ್ತಮ ಸವಿಚಾರ ಮಂಡನೆಗಾಗಿ ಶ್ರೀ ಪ್ರಕಾಶ ನಾಯಕರವರಿಗೆ ಪ್ರಶಸ್ತಿ ನೀಡಲಾಯಿತು.

ಕಾರ್ಯಕ್ರಮದ ಅವಧಿಯಲ್ಲಿ ಸಹಕಾರ ಅರ್ಥವಿವರಣೆ ಸಹಕಾರ ಸಂಘ, ಸಹಕಾರ ಚಳವಳಿ, ಸಾಧನೆಗಳು, ಸಹಕಾರ ಕಾಯ್ದೆ ನಡೆದು ಬಂದದಾರಿ, ಸೌಹಾರ್ದ ಸಹಕಾರಿ ಕಾಯ್ದೆ ಪ್ರಮುಖ ಅಂಶಗಳು, ಸಹಕಾರಿ ಆಡಳಿತ ನಿರ್ವಹಣೆ, ಹಣಕಾಸಿನ ನಿರ್ವಹಣೆ, ಸಾಲ ಪತ್ರಗಳ ದಾಖಲಾತಿ, ಸಾಲ ವಸೂಲಾತಿ ಕ್ರಮಗಳು, ಯೋಜನೆ ವ್ಯಾಪಾರ ಅಭಿವೃದ್ಧಿ ಕ್ರಮಗಳು, ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿಷಯಗಳು, ಪರಿಣಾಮಕಾರಿ ಸಂವಹನ, ಕಚೇರಿ ಆಡಳಿತ, ಲೆಕ್ಕಪರಿಶೋಧನೆ ಹಾಗೂ ಲೆಕ್ಕಪರಿಶೋಧನೆ ಸಿದ್ಧತೆಗೆ ಕ್ರಮಗಳು, ವಿವಿಧ ತೆರಿಗೆ ಕಾಯ್ದೆಗಳು ಸಭೆಗಳನ್ನು ನಡೆಸುವ ವಿಧಾನ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವ ಇತರೆ ವಿಷಯಗಳ ಬಗ್ಗೆ 20ಕ್ಕೂ

(12ನೇ ಪುಟಕ್ಕೆ...)

## ಶಿಬಿರಾರ್ಥಿಗಳ ಅನಿಸಿಕೆಗಳು

## ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ 9ನೇ ತಂಡದ



ಸಹಕಾರಿಯ ಅಭಿವೃದ್ಧಿಗೆ ನಮ್ಮ ಪಾತ್ರದ ಜವಾಬ್ದಾರಿಯನ್ನು ತಿಳಿಯಲು ಸಹಕಾರಿಯಾಗಿದೆ.
**– ಶ್ರೀ ಹೆಚ್.ಜಿ. ಮಂಜುನಾಥ್**

ತರಬೇತಿ ಕಾರ್ಯಕ್ರಮ ಉತ್ತಮವಾಗಿತ್ತು.
**– ಶ್ರೀ ಎಂ. ಅಜೇಯ ಕುಮಾರ**

ಉತ್ತಮ ಸಹಕಾರಿ ಕಾರ್ಯಕರ್ತನಾಗಲು ಸಹಕಾರಿಯಾಯಿತು.
**– ಶ್ರೀ ಪ್ರಕಾಶ ಕ.ಮೋನಾಗೋಳ**

ಬೌದ್ಧಿಕವಾಗಿ ಹೆಚ್ಚಿನ ಸಾಮರ್ಥ್ಯವನ್ನು ಪಡೆಯಲು ಸಹಾಯಕವಾಗಿದೆ.
**– ಶ್ರೀ ಬಸವರಾಜ ಈ ಗದಗಿನ**

ನನ್ನಲ್ಲಿ ಇರತಕ್ಕ ಆಲಸ ಭಾವನೆ ಹಾಗೂ ಇನ್ನಿತರ ಕಾರ್ಯಗಳಲ್ಲಿ ಬದಲಾವಣೆ ತಂದಿದೆ.
– ಶ್ರೀ ಅಕ್ಷಯ ನಿರ್ಮಲ ಕುಮಾರ ಪಾಟೀಲ

ನಮ್ಮ ಗುರಿಯನ್ನು ತಲುಪಲು ತರಬೇತಿಯು ಸಹಾಯಕವಾಗಿದೆ.
**– ರೇಣುಕಾ ಆರ್.ಸೊಮಗಿ**

ತರಬೇತಿಯ ಎಲ್ಲಾ ವಿಷಯಗಳ ಕುರಿತು ಸಮಗ್ರ ಮಾಹಿತಿಯನ್ನು ಪಡೆದೆವು.
**– ಶ್ರೀ ಸುರೇಶ ದೇವೇಂದ್ರಪ್ಪ ಶಿರ್ಕೆ**

ಉತ್ತಮ ಸಹಕಾರಿಯಾಗಲು ಸಹಾಯಕವಾಗಿದೆ.
– ಶ್ರೀ ಕೊಟ್ರಾ ನಾಯಕ್

ವ್ಯಕ್ತಿತ್ವ ವಿಕಸನಗೊಳಿಸಲು ಸಹಕಾರಿಯಾಗಿದೆ.
**– ಶ್ರೀ ತ್ರೈಯಂಬರ್ ನಾರಾಯನ ಭಟ್ಟಿ**

ಪ್ರಾಯೋಗಿಕ ತರಬೇತಿಯು ಉತ್ತಮವಾಗಿತ್ತು.
**– ಶ್ರೀ ಆರ್.ಎಸ್. ರಘುರಾಮ್**

ಕಾರ್ಯಾಗಾರದ ವ್ಯವಸ್ಥೆ ಅತ್ಯುತ್ತಮವಾಗಿತ್ತು.
**– ಶ್ರೀ ಬಸವರಾಜ ಮುದ್ದಪ್ಪ ಹಂಪಣ್ಣವರ**

ಸಮಾಜಕ್ಕೆ ಹೊಸತನ್ನು ನೀಡಬೇಕೆಂಬ ಉತ್ಸಾಹ ಬಂದಿದೆ. **– ಶ್ರೀ ಗಣೇಶಗೌಡ ಶಿವಬಸನಗೌಡ ಪಾಟೀಲ**

ಅಧ್ಯಯನ ಸಾಹಿತ್ಯ ಅತ್ಯುತ್ತಮವಾಗಿತ್ತು.
**– ಶ್ರೀ ರವಿಕಾಂತ್ ಬಿ.ಪಾಟೀಲ.**

ಅಧ್ಯಯನ ಪ್ರವಾಸ ಉತ್ತಮವಾಗಿತ್ತು.
– ಶ್ರೀ ಅಶೀಶ ಅಶೋಕ ಕಡಂಗಲೆ

ವೈಯಕ್ತಿಕ ಜೀವನದಲ್ಲಿ ಹಾಗೂ ವೃತ್ತಿಪರತೆಯಲ್ಲಿ ಬದಲಾವಣೆಯನ್ನು ತಂದಿದೆ.
**– ಶ್ರೀ ಕುಮಾರ ವಾ ಲಮಾಣಿ**

ಹೊಸ ವಿಷಯಗಳ ಕಲಿಕೆ
**– ಶ್ರೀ ಚೈತನ್ಯ ಚಂ ಶೆಟ್ಟಿ**

ಎಲ್ಲ ಸಂಪನ್ಮೂಲ ವ್ಯಕ್ತಿಗಳ ಉಪನ್ಯಾಸ ಅತ್ಯುತ್ತಮವಾಗಿತ್ತು **– ಶ್ರೀಮತಿ ಉಷಾರಾಣಿ**

ಉತ್ತಮ ಪರಿಸರದಲ್ಲಿತ್ತು.
**– ಶ್ರೀಮತಿ ಶೈಲಜ ಎಸ್.**

ತರಬೇತಿಯು ನಿಜಕ್ಕೂ ಅದ್ಭುತವಾಗಿತ್ತು.
**– ಶ್ರೀಮತಿ ಸಂಜೋತಾ ಏ ನಾಯಕ**

ವ್ಯಕ್ತಿತ್ವ ವಿಕಸನವಾಯಿತು.
– ಶ್ರೀ ಶಿವಾನಂದ ಅಣ್ಣಪ್ಪಾ ಬಂಡಕರ

# ವ್ಯಕ್ತಿತ್ವ ವಿಕಸನ ತರಬೇತಿ ಸಮಾರೋಪ ಸಮಾರಂಭ



ಸಹಕಾರಿಗೆ ಬೇಕಾಗುವ ಸಲಹೆಗಳನ್ನು ಪಡೆದುಕೊಂಡೆವು.
**– ಶ್ರೀ ಪ್ರಕಾಶ ತಿಮ್ಮಪ್ಪ ನಾಯಕ**

ತರಬೇತಿಯಿಂದ ನಮ್ಮಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ.
**ಶ್ರೀ ಮಲ್ಲಿಕಾರ್ಜುನ ಸಂಕಪ್ಪ ಉಪಾಸೆ**

ತರಬೇತಿಯಿಂದ ಹೆಚ್ಚಿನ ಜ್ಞಾನ ಪಡೆದೆವು.
**– ಕುಮಾರಿ ಭಾಗ್ಯಲಕ್ಷ್ಮೀ ಎ.ಕೋರಿ**

ಬೌದ್ಧಿಕವಾಗಿ ಹೆಚ್ಚಿನ ಸಾಮರ್ಥ್ಯವನ್ನು ಪಡೆಯಲು ಸಹಾಯಕವಾಗಿದೆ.
**– ಶ್ರೀ ಬಸವರಾಜ ಈ ಗದಗಿನ**

ವೃತ್ತಿ ಜೀವನ ಹಾಗೂ ವೈಯಕ್ತಿಕ ಜೀವನದಲ್ಲಿ ಅತ್ಯುತ್ತಮ ತಿರುವನ್ನು ಕಂಡುಕೊಳ್ಳಲು ಸಹಕಾರಿಯಾಗಿದೆ.
**– ಶ್ರೀಮತಿ ವಿಜಯಾ ಎಂ ಗಾಂವಕರ**

ತರಬೇತಿಯಲ್ಲಿ ಪಡೆದ ಅಂಶಗಳನ್ನು ಅಳವಡಿಸಿಕೊಂಡರೆ ಜೀವನದಲ್ಲಿ ಬದಲಾವಣೆ ಹೊಂದಲು ಸಾಧ್ಯವಾಗಿದೆ ಮತ್ತು ದಿನ ನಿತ್ಯದಲ್ಲಿ ಬದಲಾವಣೆತರಲು ಸಾಧ್ಯವಾಗಿದೆ.
**– ಶ್ರೀ ನಾರಾಯಣ ಮಹಾದೇವಪ್ಪಾ ಕದಂ**

ಸಹಕಾರಿಯ ಕಾಯ್ದೆ ಮತ್ತು ಕಾನೂನುಗಳನ್ನು ಅರಿತೆವು. – ಶ್ರೀ ದ್ಯಾವನಗೌಡ ಬಿ.

ಗುರಿ ಸಾಧಿಸಲು ದಾರಿ ತೋರಿಸಿದೆ.
**– ಶ್ರೀ ಬಸವರಾಜ ಪಾ.ಕದಮ್**

ಯೋಗ ಶಿಕ್ಷಣವು ಬಹಳ ಉತ್ತಮವಾಗಿತ್ತು ಈ ತರಬೇತಿಯಲ್ಲಿ ಯೋಗವನ್ನು ಅಳವಡಿಸಿರುವುದು ಉತ್ತಮ ಯೋಜನೆ – ಶ್ರೀ ಬಿ.ಜಿ.ಕಿರಣ

ಜವಾಬ್ದಾರಿಯುತ ವ್ಯಕ್ತಿಯಾಗಿ ಕಾರ್ಯನಿರ್ವಹಿಸಲು ಸಹಕಾರಿ.
– ಶ್ರೀ ಚಂದ್ರಶೇಖರ್ ಎಂ

ಉತ್ತಮವಾಗಿತ್ತು.
**– ಶ್ರೀ ಶಿವಪ್ರಸಾದ್ ಟಿ**

ತರಬೇತಿಯು ಅತ್ಯುತ್ತಮವಾಗಿತ್ತು
– ಶ್ರೀ ಚೆನ್ನಬಸಪ್ಪ ಪಾಟೀಲ

ಉಪನ್ಯಾಸ ಚೆನ್ನಾಗಿತ್ತು.
– ಶ್ರೀ ನಾಗರಾಜ ಬಿ

ಅಧ್ಯಯನ ಸಾಹಿತ್ಯವು ಅತ್ಯುತ್ತಮವಾಗಿತ್ತು.
– ಶ್ರೀ ಪ್ರದೀಪ್ ಕುಮಾರ್

ಜೀವನದಲ್ಲಿ ಮರೆಯಲಾಗದ ಒಂದು ಅನುಭವ.
– ಶ್ರೀ ಮಹಾಲಿಂಗಯ್ಯ ಈ ಹಟ್ಟಿನ ಮಠ

ಇಂತಹ ತರಬೇತಿಯು ಸಹಕಾರಿಯ ಪ್ರತಿಯೊಬ್ಬ ವ್ಯಕ್ತಿಗೂ ಅವಶ್ಯಕ.
– ಶ್ರೀ ಕಾಡಯ್ಯ ಬ. ಪೂಜೆರಿ

ನಮ್ಮನ್ನ ನಾವು ಮೌಲ್ಯ ಮಾಪನ ಮಾಡಿಕೊಳ್ಳುವಂತೆ ತರಯಾರಿಯಾಗಿದ್ದೇವೆ.
**– ಶ್ರೀ ಶರಣಬಸವ ಪಾಟೀಲ**

ಯುದ್ಧಕ್ಕೆ ಅಣಿ ಮಾಡುವ ಯೋಧರಂತೆ ನಮ್ಮನ್ನು ತಯಾರುಮಾಡಿದೆ. – ಶ್ರೀ ಚೇತನ್ ಜಿ

(...9ನೇ ಪುಟದಿಂದ)

ಹೆಚ್ಚು ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ, ಏರ್ಪಡಿಸಲಾಗಿತ್ತು.

ಪ್ರತಿದಿನ ಬೆಳಗ್ಗೆ ಯೋಗ ಶಿಕ್ಷಣವನ್ನು ಎರ್ಪಡಿಸಲಾಗಿತ್ತು. ಅಧ್ಯಯನ ಪ್ರವಾಸದ ಅಂಗವಾಗಿ ಯು.ಕೆ. ಸೌಹಾರ್ದ ಸಹಕಾರಿ ಯಲ್ಲಾಪುರ, ಶ್ರೀಮಾತಾ ಸೌಹಾರ್ದ ಸಹಕಾರಿ ಉಮ್ಮಚಗಿ, ಸ್ಪೈಸ ರೂಟ್ ಸೌಹಾರ್ದ ಸಹಕಾರಿ, ತೋಟಗಾರ್ಸ ಸಹಕಾರಿ ಸಂಘ (ಟಿಎಸೆಸ್) ಶಿರಸಿ, ಕದಂಬ ಮಾರ್ಕೆಟಿಂಗ ಸೌಹಾರ್ದ ಸಹಕಾರಿ ಶಿರಸಿ ಗಳಿಗೆ ಭೇಟಿ ನೀಡಲಾಯಿತು. ಪ್ರವಾಸಿ ತಾಣಗಳಾದ ಸಾತೊಡ್ಡಿ ಫಾಲ್ಸ, ಬನವಾಸಿಯ ಮಧುಕೇಶ್ವರ ದೇವಾಲಯ ಹಾಗೂ ಮಾರಿಕಾಂಬಾ ದೇವಸ್ಥಾನಗಳಿಗೆ ಭೇಟಿನೀಡಲಾಯಿತು.

ಪ್ರಾಯೋಗಿಕ – 1ರಲ್ಲಿ ಆಡಳಿತ ಸಮಿತಿ ಸಭೆಯ ನೋಟೀಸು ಸಿದ್ಧಪಡಿಸುವುದು, ಸಭೆಗಳನ್ನು ನಡೆಸುವುದು, ನಡುವಳಿಕೆಗಳನ್ನು ಬರೆಯುವುದರ ಬಗ್ಗೆ ತಿಳುವಳಿಕೆ ನೀಡಲಾಯಿತು. ಪ್ರಾಯೋಗಿಕ – 2ರಲ್ಲಿ ಲೆಕ್ಕಪತ್ರಗಳನ್ನು ಇಡುವ ವಿಧಾನ, ರಶೀದಿ,ವೋಚರ,ನಗದು ಪುಸ್ತಕ, ಜನರಲ್ ಲೆಡ್ಜರ ಜಮಾಖಚು,ಟ್ರಯಲ್ ಬ್ಯಾಲೆನ್ಸ ಸಿದ್ಧಪಡಿಸುವುದು ಹಾಗೂ ಅಂತಿಮ ಲೆಕ್ಕ ಪತ್ರಗಳನ್ನು ಸಿದ್ಧಪಡಿಸುವ ಬಗ್ಗೆ ತಿಳಿವಳಿಕೆ ನೀಡಲಾಯಿತು.





ಯು.ಕೆ. ಸೌಹಾರ್ದ ಸಹಕಾರಿಗೆ ಭೇಟಿ




ಕದಂಬ ಸೌಹಾರ್ದ ಸಹಕಾರಿಯ ಅಧ್ಯಯನ

## ಶಿವಮೊಗ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಪ್ರವರ್ತಕರ ಸಭೆ

ಶಿವಮೊಗ್ಗ ಜಿಲ್ಲಾ ಮಟ್ಟದ ಸೌಹಾರ್ದ ಸಹಕಾರಿಗಳ ಒಕ್ಕೂಟವನ್ನು ರಚನೆ ಮಾಡುವ ಬಗ್ಗೆ ವಿವರವಾಗಿ ಚರ್ಚೆ ನಡೆಯಿತು. ಇದರಲ್ಲಿ ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲಾ ನಿರ್ದೇಕರಾದ ಶ್ರೀ ರವಿಕುಮಾರ ಹೆಚ್.ವಿ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು ಸಂಯುಕ್ತ ಸಹಕಾರಿಯವತಿಯಿಂದ ಶ್ರೀ ಶ್ರೀಕಾಂತ್ ಬರುವೆ ಸಹ ಪ್ರಧಾನ ವ್ಯವಸ್ಥಾಪಕರು ಇವರು ಭಾಗವಹಿಸಿದ್ದರು.

**ಸಮನ್ವಯ ಸಮಿತಿ ಸದಸ್ಯರು :** ಶ್ರೀ ಎಚ್.ಬಿ. ರವಿಕುಮಾರ, ಶ್ರೀ ವೆಂಕಟೇಶ ಸಾಗರ, ಶ್ರೀ ಅನಂತ ದತ್ತ, ಶ್ರೀ ಪ್ರಸನ್ನ ಕುಮಾರ, ಶ್ರೀ ಎಚ್.ಎಸ್. ಮಂಜಪ್ಪ,

## ಡಾ॥ ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಂಕಲಿ ಪ್ರಗತಿ ಮುನ್ನೋಟ

ಶೇರು ಬಂಡವಾಳ – 1,24,31,720.00, ಕಾಯ್ದಿಟ್ಟ ಮತ್ತು ಇತರ ನಿಧಿಗಳು – 8,78,59,677.38, ಠೇವುಗಳು – 1,38,95,57,082.64, ಬ್ಯಾಂಕ್ ಠೇವು ಮತ್ತು ಗುಂತಾವಣೆಗಳು – 79,43,59,804.64, ಸಾಲ ಮತ್ತು ಮುಂಗಡಗಳು – 72,88,99,594.30, ಲಾಭ – 12,21,541.15, NPA – 45,00,000.00, 75,21,541.15, ದುಡಿಯುವ ಬಂಡವಾಳ – 149.74 ಕೋಟಿ, ವಾರ್ಷಿಕ ವಹಿವಾಟು – 2430 ಕೋಟಿ.

ಸಹಕಾರಿಯಲ್ಲಿ ವಿಶೇಷ ಸೌಲಭ್ಯಗಳನ್ನು ಇದಗಿಸುತ್ತಿದೆ. ಎಂದು ಶ್ರೀ ಮಹಾಂತೇಶ ಲಿಂರ್ಗಡಾ ಪಾಟೀಲ್ ಅಧ್ಯಕ್ಷರು ಹಾಗೂ ಪ್ರಧಾನ ವ್ಯವಸ್ತಾಪಕರು ಶ್ರೀ ದೇವೇಂದ್ರ ಸಿ.ಕರೋಶಿ ರವರು ತಿಳಿಸಿದ್ದಾರೆ.

# 6 ಜುಲೈ 2013 ಅಂತರ ರಾಷ್ಟ್ರೀಯ ಸಹಕಾರಿಗಳ ದಿನಾಚರಣೆ

**ಅಂತರ ರಾಷ್ಟ್ರೀಯ ಸಹಕಾರ ದಿನಾಚರಣೆ ಅಂಗವಾಗಿ ಮೈಸೂರಿನ ಪತ್ರಕರ್ತರ ಸಭಾ ಭವನದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರ ಅವರು ಪತ್ರಿಕಾಗೋಷ್ಠಿಯನ್ನು ನಡೆಸಿದರು. ಈ ಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಚ್.ವಿ. ರಾಜೀವ್ ಹಾಗೂ ಶ್ರೀ ದಿನೇಶ್ ಗುಪ್ತ ಉಪಸ್ಥಿತರಿದ್ದರು.**

ವಿಶ್ವದ ಸಹಕಾರ ಚಳುವಳಿಯ ವಿಶೇಷವಾಗಿ ಭಾರತದ ಸಹಕಾರ ಚಳುವಳಿಯ ಕಾರ್ಯಚಟುವಟಿಕೆ ಹಾಗೂ ಪ್ರಗತಿಯನ್ನು ಗಮನಿಸಿದ ವಿಶ್ವಸಂಸ್ಥೆಯವರು (UNO) ವರ್ಷ 2012ನ್ನು ಅಂತರ ರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ ಘೋಶಿಸಿದ್ದರು. ಸಹಕಾರ ಚಳುವಳಿಯ ಬಲಸಂವರ್ಧನೆಗೆ ವಿಶ್ವವ್ಯಾಪಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿ ಕೊಂಡು ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲಾಗಿತ್ತು. ಸಹಕಾರ ಸಂಘಟನೆಗಳು ಉತ್ತಮ ರಾಷ್ಟ್ರ ನಿರ್ಮಾಣ ಮಾಡಬಲ್ಲವು ಎಂಬುದಾಗಿ ಹೇಳಲಾಗಿತ್ತು.

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು (International cooperative Alliance) ಪ್ರತಿ ವರ್ಷ ಜುಲೈ ಮೊದಲ ಶನಿವಾರವನ್ನು ಅಂತರರಾಷ್ಟ್ರೀಯ ಸಹಕಾರಿ ದಿನವನ್ನಾಗಿ ಆಚರಿಸಲಾಗುತ್ತಿದೆ. ಅದರಂತೆ ಈ ದಿನವನ್ನು 6 ಜುಲೈ 2013ರನ್ನು ಅಂತರರಾಷ್ಟ್ರೀಯ ಸಹಕಾರಿಗಳ ದಿನವನ್ನಾಗಿ ಆಚರಿಸಲಾಗುತ್ತಿದೆ. ಇದೆ ಸಂದರ್ಭದಲ್ಲಿ "ಸಹಕಾರಿ ಸಂಘಟನೆಗಳು" ವಿಪತ್ತಿನಲ್ಲೂ ಸಹ ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ ಎಂಬ ಮಹತ್ವದ ಸಂದೇಶವನ್ನು ವಿಶ್ವದ ಸಹಕಾರಿಗಳಿಗೆ ನೀಡಿರುತ್ತಾರೆ.

ನಮ್ಮ ದೇಶದ ಸಂವಿಧಾನಕ್ಕೆ 2012ರಲ್ಲಿ 97 ನೇ ತಿದ್ದುಪಡಿಮಾಡುವುದರ ಮೂಲಕ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವುದು ಸಂವಿಧಾನಾತ್ಮಕ ಹಕ್ಕು ಎಂದು ತಿಳಿಸಿದೆ. ಸಂವಿಧಾನಾತ್ಮ ಮಾನ್ಯತೆಯನ್ನು ಸಹಕಾರ ಕ್ಷೇತ್ರಕ್ಕೆ ನೀಡಿದೆ. ಸಹಕಾರಿಗಳಿಗೆ ಸ್ವಾಯತ್ತತೆಯ ಜೊತೆಗೆ ಸ್ವಯಂ ಆಡಳಿತದ ಅಧಿಕಾರ ಹಾಗೂ ಹೆಚ್ಚಿನ ಜವಾಬ್ದಾರಿಯನ್ನು ನೀಡಿದೆ. ಸದರಿ ತಿದ್ದುಪಡಿಗಳನ್ನು ರಾಜ್ಯದ ಎರಡೂ ಸಹಕಾರಿ ಕಾಯ್ದೆಗಳಲ್ಲಿ ಅಳವಡಿಸಲಾಗಿದೆ.

ಆದರೆ ಈ ತಿದ್ದುಪಡಿಗಳಲ್ಲಿ ಕೆಲವು 97ನೇ ಸಂವಿಧಾನ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಗಳಿಗೆ ವ್ಯತಿರಿಕ್ತವಾಗಿವೆ. ಸಹಕಾರಿ ಕ್ಷೇತ್ರದ ಸ್ವಾಯತ್ತತೆಯನ್ನು ಮೊಟಕುಗೊಳಿಸುತ್ತವೆ. ಆದ್ದರಿಂದ ಇವುಗಳ ಬದಲಾವಣೆಯಾಗಬೇಕಿದೆ. ಕರ್ನಾಟಕ ಸರಕಾರ ಹಾಗೂ ಮಾನ್ಯ ಸಹಕಾರಿ ಮಂತ್ರಿಗಳಿಗೆ ಈ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ. ಶ್ರೀಯುತರು ಈ ಬಗ್ಗೆ ತೀವ್ರ ಗಮನಹರಿಸುವುದಾಗಿ ತಿಳಿಸಿದ್ದಾರೆ. ಅಗತ್ಯ ಮಾರ್ಪಾಡುಗಳನ್ನು ಮಾಡಿಕೊಡುವುದಾಗಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ನೇತಾರನಾಗಿ ಕಾರ್ಯನಿರ್ವಹಿಸುತ್ತಿದೆ. ಈ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಸಹಕಾರ ಶಿಕ್ಷಣ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಪ್ರಸ್ತುತ ಅಂತರರಾಷ್ಟ್ರೀಯ ಸಹಕಾರಿಗಳ ದಿನಾಚರಣೆಯ ಅಂಗವಾಗಿ "ಸೌಹಾರ್ದ ಸಹಕಾರಿಗಳ ಸದಸ್ಯರ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲು ಉದ್ದೇಶಿಸಿ ಇಂದು ಮೈಸೂರಿನಲ್ಲಿ ಅಧಿಕೃತ ಉದ್ಘಾಟನೆಯಾಗಿದೆ.

ಮೈಸೂರಿನ ಸೌಹಾರ್ದ ಸಹಕಾರಿಗಳ ಸದಸ್ಯರಿಗಾಗಿ ತರಬೇತಿ ಕಾರ್ಯಕ್ರಮವನ್ನು ಇವತ್ತು ಪ್ರಾರಂಭಿಸಲಾಗಿದೆ. ಇದೇ ಮಾದರಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ. ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಸಹಕಾರಿ ಸಂಸ್ಥೆಗಳಲ್ಲಿಯೆ ಈ ತರಹದ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಇದರಲ್ಲಿ ಬಹು ಮುಖ್ಯವಾಗಿ ಸದಸ್ಯರಿಗೆ ಸಹಕಾರಿ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವ ವಿಷಯಗಳ ಬಗ್ಗೆ ಉಪನ್ಯಾಸ ನೀಡಲಾಗುವುದು. ■

## ಸಹಕಾರಿ ಸಂಘಕ್ಕೆ 10 ಜನ ಲೆಕ್ಕ ಪರಿಶೋಧಕರನ್ನು ಸೂಚಿಸಿರುವುದು ಸರಿಯಾದ ಕ್ರಮವಲ್ಲ

### ಸಹಕಾರ ಕಾಯ್ದೆ ತಿದ್ದುಪಡಿಗೆ ಹೈಕೋರ್ಟ್ ನಕಾರ



ಸಹಕಾರ ಸಂಘಗಳು ಲೆಕ್ಕ ಪರಿಶೋಧನೆಯನ್ನು ಇಲಾಖೆ ಸೂಚಿತ ಲೆಕ್ಕಪರಿಶೋಧಕರಿಂದಲೇ ನಡೆಸಬೇಕು ಎನ್ನುವ ಕುರಿತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ತಿದ್ದುಪಡಿ ಕಲಂ 63(1)ನ್ನು ಇಲ್ಲಿನ ಹೈಕೋರ್ಟ್ ಸಂಚಾರಿ ಪೀಠ ತಳ್ಳಿಹಾಕಿ ಶುಕ್ರವಾರ ಆದೇಶ ಹೊರಡಿಸಿದೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ–1959ಕ್ಕೆ ಸರ್ಕಾರ 2013ರ ಫೆಬ್ರುವರಿ 11ರಂದು ತಿದ್ದುಪಡಿ ತಂದಿತ್ತು. ತಿದ್ದುಪಡಿ ನಿಯಮ 63 (1)ರಡಿ ಸಹಕಾರ ಸಂಘಗಳು ಪ್ರತಿ ವರ್ಷ ಲೆಕ್ಕ ಪರಿಶೋಧನೆಯನ್ನು ಸರ್ಕಾರ ಸೂಚಿಸುವ 10 ಲೆಕ್ಕಪರಿಶೋಧಕರ ಪೈಕಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿತ್ತು.

ಇದನ್ನು ಪ್ರಶ್ನಿಸಿ ಸುಮಾರು 46 ಸಹಕಾರ ಸಂಘಗಳು ಹೈಕೋರ್ಟ್ ಸಂಚಾರಿ ಪೀಠದಲ್ಲಿ ಪ್ರತ್ಯೇಕ ರಿಟ್ ಅರ್ಜಿ ದಾಖಲಿಸಿದ್ದವು. ಈ ತಿದ್ದುಪಡಿ ಸಾರ್ವಜನಿಕ ಹಿತದೃಷ್ಟಿಯಿಂದಲೇ ಜಾರಿಗೊಳಿಸಲಾಗಿದೆ. ಅಲ್ಲದೇ, ಈ ಕುರಿತು ನಿಯಮಾವಳಿ ರೂಪಿಸಲಾಗಿದೆ ಎಂದು ಸರ್ಕಾರಿ ವಕೀಲರು ವಾದಿಸಿದರು. ಇಂಥ ತಿದ್ದುಪಡಿ ತರಲು ಕಾನೂನಿನಲ್ಲಿ ಅವಕಾಶವಿಲ್ಲ. ಅಲ್ಲದೇ, ನಿಯಮ 63 (1), ಸಂವಿಧಾನದ ಅನುಚ್ಛೇದ 243 (2)ಕ್ಕೆ ವಿರುದ್ಧವಾಗಿದೆ. ಸಹಕಾರಿ ಸಂಘಕ್ಕೆ 10 ಜನ ಲೆಕ್ಕ ಪರಿಶೋಧಕರನ್ನು ಸೂಚಿಸಿರುವುದು ಸರಿಯಾದ ಕ್ರಮವಲ್ಲ ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿ ಎಚ್.ಜಿ.ರಮೇಶ ಅವರಿದ್ದ ಏಕಸದಸ್ಯ ಪೀಠ ತಳ್ಳಿಹಾಕಿತು.

# ಕರ್ನಾಟಕ ಸೌಹಾರ್ದ ಸಹಕಾರಿ ಕರಡು ನಿಯಮಾವಳಿ 2013ರ ಕುರಿತಂತೆ ಸಹಕಾರಿಗಳ ಸಮಾಲೋಚನಾ ಸಭೆ





ದಿನಾಂಕ : 28 ಮೇ 2013 ರಂದು ಕರ್ನಾಟಕ ಘನ ಸರಕಾರವು ಕರ್ನಾಟಕ ಸೌಹಾರ್ದ ಸಹಕಾರಿ ಕರಡು ನಿಯಮಾವಳಿಗಳನ್ನು ರಚಿಸಿ ಸದರಿ ನಿಯಮಾವಳಿಗಳಿಂದ ಭಾದಿತರಾದ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಸಲ್ಲಿಸಲು ಸೂಚಿಸಿ ಒಂದು ತಿಂಗಳ ಅವಧಿಯನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಚರ್ಚಿಸಲು ಸೌಹಾರ್ದ ಸಹಕಾರಿಗಳಿಂದ ಬಂದಿರುವ ಮನವಿಗಳ ಹಿನ್ನೆಲೆಯಲ್ಲಿ ರಾಜ್ಯದ ಸಹಕಾರಿಗಳ ಸಮಾಲೋಚನೆಯನ್ನು ದಿನಾಂಕ : 15–6–2013 ರಂದು ಬೆಂಗಳೂರಿನ ಯಶವಂತಪುರದಲ್ಲಿರುವ ಹೋಟೆಲ್ ಪಾರಿಜಾತದಲ್ಲಿ ಸಮಾಲೋಚನಾ ಸಭೆಯನ್ನು ಕರೆಯಲಾಗಿತ್ತು.

ಸದರಿ ಸಭೆಯು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ, ಅನೇಕ ನಿರ್ದೇಶಕರುಗಳು, ಸಹಕಾರಿಗಳ ನಿವೃತ್ತ ಅಪರ ನಿಬಂಧಕರುಗಳಾದ ಶ್ರೀ ಸಿ.ಎನ್.ಪರಶಿವಮೂರ್ತಿ, ಶ್ರೀ ಆರ್.ಎಸ್.ಹುಚ್ಚಾಚಾರಿ, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಶ್ರೀ ವಿಶ್ವನಾಥ ಹಿರೇಮಠ್, ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು ಅನೇಕ ಸಹಕಾರಿಗಳ ಅಧ್ಯಕ್ಷರುಗಳು ನಿರ್ದೇಶಕರುಗಳು ಭಾಗವಹಿಸಿದ್ದರು. 97ನೇ ಸಂವಿಧಾನ ತಿದ್ದುಪಡಿಗೆ ಹಾಗೂ ಸೌಹಾರ್ದ ಸಹಕಾರಿ ಆಶಯ ಹಾಗೂ ಸ್ವರೂಪಕ್ಕೆ ವ್ಯತಿರಿಕ್ತವಾಗುವ ಸಹಕಾರಿಗಳ ಸ್ವಾಯತ್ತತೆಯನ್ನು ನಿಯಂತ್ರಿಸುವ ಪರೋಕ್ಷವಾಗಿ ಸರಕಾರದ ಹಸ್ತಕ್ಷೇಪಗಳಿಗೆ ಅವಕಾಶ ವಿರುವ ಅಂಶಗಳನ್ನು ಸರಕಾರದ ಗಮನಕ್ಕೆ ತರಬೇಕೆಂದು, ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಾವಳಿ 2013ಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ಸ್ವಾಗತಿಸಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರ ಪ್ರಾಸ್ತಾವಿಕವಾಗಿ ಮಾತನಾಡಿದರು ನಂತರ ನಡೆದ ಸಭೆಯಲ್ಲಿ ನಿಯಮಾವಳಿಗಳನ್ನು ಕ್ರಮಾಂಕವಾಗಿ ಚರ್ಚಿಸಲಾಯಿತು. ಅನೇಕ ಪ್ರತಿನಿಧಿಗಳು ಸಹ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

## ಸ್ವಾಭಿಮಾನಿ ಸಹಕಾರಿ ಅನಿಸಿಕೆ – ಅಭಿಪ್ರಾಯ

### ವೃತ್ತಿಗೆ ಬಹಳ ಹತ್ತಿರವಾಗಿವೆ

ಉದ್ಯೋಗಸ್ಥ ಮಹಿಳೆಯ ಜವಾಬ್ದಾರಿ, ಕೆಲಸದಲ್ಲಿ ಅಚ್ಚುಕಟ್ಟುತನ ಇವೆಲ್ಲ ಇನ್ನೊಮ್ಮೆ ವೃತ್ತಿನಿರತ ಮಹಿಳೆ ಆತ್ಮವಿಶ್ವಾಸದ ಗಣಿ ಎಂಬ ಲೇಖನದಿಂದ ನೆನಪಿಸಿದಂತಾಯಿತು; ಮತ್ತು ಚಿಟ್ ಫಂಡ್ ಬಗ್ಗೆ ಇರುವ ಮಾಹಿತಿಯು ತುಂಬಾ ಉಪಯುಕ್ತವಾಯಿತು. ಡಬ್ಬ ವಾಲಗಳ ಏಕಾಗ್ರತೆ ಆತ್ಮವಿಶ್ವಾಸ ಇವೆಲ್ಲ ಆರ್ಥಿಕ ವ್ಯವಹಾರದಲ್ಲಿ ಈ ಲೇಖನಗಳು ಬಹಳ ಸಹಕಾರಿಯಾಗಿವೆ. ನಿಜಕ್ಕೂ ಸಂಪಾದಕರ ಈ ಲೇಖನಗಳ ಸಂಗ್ರಹಣೆ ಮತ್ತು ಪ್ರಕಟಣೆ ನಮ್ಮ ವೃತ್ತಿಗೆ ಬಹಳ ಹತ್ತಿರವಾಗಿವೆ. ಹೀಗೆ ಸ್ವಾಭಿಮಾನಿ ಸಹಕಾರಿ ಮೂಡಿಬರಲಿ.

– **ಅನಿತ ಸುಭಾಷ್ ಶಿರಾಳಕೊಪ್ಪ.**

## ಯಶಸ್ವಿನಿ ಆರೋಗ್ಯ ಯೋಜನೆ ಮುಖ್ಯ ಸಂಯೋಜಕ ಶ್ರೀ ಆರ್.ಎಂ. ನಟರಾಜ್ ಸಂಯುಕ್ತ ಸಹಕಾರಿಗೆ ಭೇಟಿ



ಶ್ರೀ ಆರ್.ಎಂ. ನಟರಾಜ್ ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ) ಮುಖ್ಯ ಸಂಯೋಜಕರು ಯಶಸ್ವಿನಿ ಆರೋಗ್ಯ ಯೋಜನೆ ಇವರು ದಿನಾಂಕ : 02.07.2013ರಂದು ಸಂಯುಕ್ತ ಸಹಕಾರಿಗೆ ಭೇಟಿನೀಡಿ ಸಂಯುಕ್ತ ಸಹಕಾರಿಯ ಅಧಿಕಾರಿಗಳೊಡನೆ ಯಶಸ್ವಿನಿ ಆರೋಗ್ಯ ಯೋಜನೆಯ ವಿವರಗಳನ್ನು ತಿಳಿಸಿದರು ಹಾಗೂ ನಗರವಾಸಿಗಳಿಗಾಗಿ ಪ್ರತ್ಯೇಕ ಯಶಸ್ವಿನಿ ಯೋಜನೆಯನ್ನು ಮಾಡಬಹುದಾಗಿದೆ. ಸದ್ಯಕ್ಕೆ ಗ್ರಾಮಾಂತರ ಜನರಿಗೆ ಯಶಸ್ವಿನಿ ಸೌಲಭ್ಯಗಳು ಲಭ್ಯ ಇವೆ ಎಂದು ತಿಳಿಸಿದರು; ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ **ಗ್ರಾಮೀಣ ಪ್ರದೇಶಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಈ ಯಶಸ್ವಿನಿ ಆರೋಗ್ಯ ಯೋಜನೆಯ ಸೌಲಭ್ಯಗಳನ್ನು ಅನ್ವಯಿಸುತ್ತದೆ.** ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿ ಅಧಿಕಾರಿಯವರಿಂದ ಶ್ರೀ ಆರ್.ಎಂ. ನಟರಾಜ್ ರವರಿಗೆ ಸನ್ಮಾನಿಸಿ ಗೌರವಿಸಲಾಯಿತು.

## ಸಹಕಾರ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ಅವಶ್ಯಕ – ಎಸ್.ಆರ್. ಸತೀಶ್ಚಂದ್ರ

**1959ರ ಕಾಯ್ದೆಯಡಿ ನೋಂದಣಿಯಾಗಿರುವ ಕ್ರೆಡಿಟ್ ಸಹಕಾರ ಸಂಘಗಳಿಗಾಗಿ ದಿನಾಂಕ 20.06.2013ರಂದು ನಡೆದ "ಕ್ರೆಡಿಟ್ ಸಹಕಾರ ಸಂಘಗಳ ಉಪವಿಧಿ ತಿದ್ದುಪಡಿ ತರಬೇತಿ ಕಾರ್ಯಕ್ರಮ"**

1959ರ ಸಹಕಾರ ಸಂಘಗಳ ಕಾಯ್ದೆಯಡಿ ನೋಂದಣಿಯಾಗಿರುವ ಕ್ರೆಡಿಟ್ ಸಹಕಾರ ಸಂಘಗಳಿಗಾಗಿ ಕರ್ನಾಟಕ ರಾಜ್ಯ ಕ್ರೆಡಿಟ್ ಸೊಸೈಟೀಸ್ ಅಸೋಸಿಯೇಷನ್, ಬೆಂಗಳೂರು ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಸಹಯೋಗದೊಂದಿಗೆ "ಕ್ರೆಡಿಟ್ ಸಹಕಾರ ಸಂಘಗಳ ಉಪವಿಧಿ ತಿದ್ದುಪಡಿ ತರಬೇತಿ ಕಾರ್ಯಕ್ರಮ"ವನ್ನು ದಿ : 20.06.2013 ರಂದು ಆರ್.ಐ.ಸಿ.ಎಂ., ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಶ್ರೀ ಎಸ್.ಆರ್.ಸತೀಶ್‌ಚಂದ್ರ, ಅಧ್ಯಕ್ಷರು, ಕ.ರಾ.ಸೌ. ಸಂ.ನಿ., ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತ ನಾಡುತ್ತ ಸಂವಿಧಾನ ತಿದ್ದುಪಡಿ ಹಾಗೂ ಸಹಕಾರ ಕಾಯ್ದೆಗಳ ತಿದ್ದುಪಡಿಯಿಂದಾಗಿ ರಾಜ್ಯದ ಎಲ್ಲ ಸಹಕಾರಿಗಳು ತಮ್ಮ ಉಪವಿಧಿಗಳನ್ನು ತಿದ್ದುಪಡಿ ಮಾಡಿಕೊಳ್ಳಬೇಕಿರುತ್ತದೆ. ಈಗಾಗಲೇ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳಿಗಾಗಿ 33 ಉಪವಿಧಿ ತಿದ್ದುಪಡಿ ಕಾರ್ಯಾಗಾರಗಳನ್ನು ನಡೆಸಿರುತ್ತದೆ.

1959ರ ಕಾಯ್ದೆಯಲ್ಲಿರುವ ಪತ್ತಿನ ಸಹಕಾರ ಸಂಘಗಳಿಗೂ ಕೂಡ ಈ ಬಗ್ಗೆ ಮಾಹಿತಿ ಒದಗಿಸುವ ಸಲುವಾಗಿ ಕರ್ನಾಟಕ ರಾಜ್ಯ ಕ್ರೆಡಿಟ್ ಸೊಸೈಟೀಸ್ ಅಸೋಸಿಯೇಷನ್ ಜೊತೆ ಸೇರಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದರು. ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಸಹಕಾರ ಕ್ಷೇತ್ರವು ಪರಸ್ಪರ ಸಹಕಾರದೊಂದಿಗೆ ಮುನ್ನಡೆಯಬೇಕಿರುವ ಅವಶ್ಯಕತೆಯಿದೆ ಎಂದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಗುರುನಾಥ



ಜ್ಯಾಂತೀಕರ, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟೀಸ್ ಅಸೋಸಿಯೇಷನ್ ಇವರು ನಡೆಸಿಕೊಟ್ಟರು. ತರಬೇತಿಯ ಅವಧಿಯಲ್ಲಿ ಕ್ರೆಡಿಟ್ ಸಹಕಾರ ಸಂಘಗಳ ಉಪವಿಧಿ ತಿದ್ದುಪಡಿ ವಿಷಯದ ಬಗ್ಗೆ ಶ್ರೀ ಸಿ.ಎನ್.ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ಇವರು ತಿಳಿಸಿಕೊಟ್ಟರು. ನಂತರ ರಾಜ್ಯದ ಸಹಕಾರ ಕ್ಷೇತ್ರದ ಬೆಳವಣಿಗೆಯ ಕುರಿತಂತೆ ಹಾಗೂ 1997ರ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ಬಗ್ಗೆ ಮಾಹಿತಿಯನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ.ಕಾರಕೂನ ಹಾಗೂ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್‌ರವರು ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮಕ್ಕೆ 27 ಸಹಕಾರಿಗಳಿಂದ 40 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

# 'ಯಶಸ್ವಿನಿ ಆರೋಗ್ಯ ಯೋಜನೆ' – ವೆಬ್‌ತಾಣ

## http://yeshasvini.kar.nic.in

■ ರಘುನಂದನ ಕೆ.
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಸಪ್ತ ತತ್ವಗಳ ಆಧಾರದಲ್ಲಿ ಬೆಳೆದು ಬಂದ ಸಹಕಾರ ಕ್ಷೇತ್ರ ಮುಖ್ಯವಾಗಿ ಗ್ರಾಮೀಣ ಭಾಗದ ವಾಣಿಜ್ಯಾತ್ಮಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತ ಬಂದಿದೆ. 'ಸಾಮಾಜಿಕ ಕಳಕಳಿ'ಯನ್ನು ತತ್ವವಾಗಿ ಹೊಂದಿರುವ ಸಹಕಾರ ಕ್ಷೇತ್ರ ಸಾಮಾಜಿಕ ಅಭಿವೃದ್ಧಿಯಲ್ಲಿ ಗಣನೀಯ ಪ್ರಮಾಣದ ಕೊಡುಗೆಯನ್ನು ನೀಡಿದೆ. ಪ್ರಸ್ತುತ, ವಾಣಿಜ್ಯಾತ್ಮಕ ಹಾಗೂ ಆರ್ಥಿಕ ಉದ್ದೇಶಗಳೇ ಪ್ರಬಲವಾಗುತ್ತ ಸಾಮಾಜಿಕ ಕಳಕಳಿಯ ಉದ್ದೇಶ ದುರ್ಬಲವಾಗುತ್ತಿರುವಂತೆ ಕಾಣುತ್ತಿದೆ. ಸಮಾಜದ ಆರೋಗ್ಯದ ದೃಷ್ಟಿಯಿಂದ ಸಹಕಾರ ಕ್ಷೇತ್ರವು ಸಾಮಾಜಿಕ ಕಳಕಳಿಯ ತತ್ವ ಕೇಂದ್ರಿತ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಅವಶ್ಯಕತೆಯಿದೆ.

ಇತ್ತೀಚಿನ ದಿನಗಳಲ್ಲಿ ಜನ ಸಾಮಾನ್ಯರು ಆರೋಗ್ಯ ಕಾರಣಗಳಿಗಾಗಿ ಹಾಗೂ ಹೆಚ್ಚುತ್ತಿರುವ ವೈದ್ಯಕೀಯ ವೆಚ್ಚಗಳಿಂದಾಗಿ ಸ್ವಸ್ಥ ಜೀವನ ನಡೆಸಲು ಕಷ್ಟಪಡುತ್ತಿದ್ದಾರೆ. ಸಹಕಾರಿಯ ಸದಸ್ಯರ ಹಾಗೂ ಜನತೆಯ ಆರೋಗ್ಯದ ದೃಷ್ಟಿಯಿಂದ ಸಹಕಾರ ಕ್ಷೇತ್ರವು ಆರೋಗ್ಯ ರಕ್ಷಣೆಯ ಕುರಿತಂತೆ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ, ಯೋಜನೆಗಳನ್ನು ರೂಪಿಸುವುದರ ಮೂಲಕ ಸಾಮಾಜಿಕ ಕಳಕಳಿಯ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಬೇಕಿದೆ. ಈ ಹಿನ್ನಲೆಯಲ್ಲಿ, ಸಹಕಾರ ಕ್ಷೇತ್ರದ ಮೂಲಕ ಜಾರಿಗೆ ತರಲಾದ ಮಾದರೀ ಹಾಗೂ ಜನಪ್ರಿಯ ಯೋಜನೆಯಾದ 'ಯಶಸ್ವಿನಿ ಆರೋಗ್ಯ ಯೋಜನೆ'ಯ ಕುರಿತು ಮಾಹಿತಿ ಒದಗಿಸುವ ವೆಬ್‌ತಾಣದ ಪರಿಚಯ ಇಲ್ಲಿದೆ. ಈ ಮಾಹಿತಿ ಸಹಕಾರಿಗಳಿಗೆ ಹೊಸ ಆರೋಗ್ಯ ಯೋಜನೆಗಳನ್ನು ರೂಪಿಸುವಲ್ಲಿ ಸಾಮಾಜಿಕ ಸ್ವಾಸ್ಥ್ಯದ ರಕ್ಷಣೆಯಲ್ಲಿ ಮಾರ್ಗದರ್ಶಕವಾಗಲಿ ಎನ್ನುವ ಆಶಯ ನಮ್ಮದು.

ವೆಬ್‌ತಾಣ 13 : http://yeshasvini.kar.nic.in

ಸಹಕಾರ ಕ್ಷೇತ್ರದಲ್ಲಿನ ರೈತರ ಆರೋಗ್ಯದ ಕಾಳಜಿಯೊಂದಿಗೆ 'ರೈತರ ಆರೋಗ್ಯ ನಾಡಿನ ಭಾಗ್ಯ' ಎಂಬ ಘೋಷ ವಾಕ್ಯದೊಂದಿಗೆ ಕರ್ನಾಟಕ ಸರ್ಕಾರದಿಂದ 2002ರಲ್ಲಿ ಪರಿಚಯಿಸಲ್ಪಟ್ಟ ಯೋಜನೆಯೇ ಯಶಸ್ವಿನಿ ಆರೋಗ್ಯ ಯೋಜನೆ. ದೇಶದಲ್ಲೇ ಮಾದರಿಯಾದ ಸ್ವಯಂ ಹಣಕಾಸಿನ ಪ್ರಾಯೋಜಕತ್ವದ 'ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್' ಮೂಲಕ ನಡೆಸಲ್ಪಡುತ್ತಿರುವ ಯೋಜನೆ ಇದು. ಗ್ರಾಮೀಣ ಭಾಗದ ಸಹಕಾರ ಸಂಸ್ಥೆಗಳ ಸದಸ್ಯರಿಗೆ ಅನ್ವಯವಾಗುವ ಈ ಯೋಜನೆ 458 ನೆಟ್‌ವರ್ಕಿಂಗ್ ಆಸ್ಪತ್ರೆಗಳನ್ನು ಹೊಂದಿರುವುದಲ್ಲದೇ 805ಕ್ಕೂ ಹೆಚ್ಚು ಶಸ್ತ್ರಚಿಕಿತ್ಸಾ ವಿಧಾನಗಳ ವ್ಯಾಪ್ತಿಯನ್ನೊಳಗೊಂಡಿರುತ್ತದೆ. ಈ ಯೋಜನೆಯ ಹೆಚ್ಚಿನ ಮಾಹಿತಿಯನ್ನು ವೆಬ್‌ತಾಣದಲ್ಲಿ ನೋಡಬಹುದು.

- ಯಶಸ್ವಿನಿ ಯೋಜನೆಯ ಆರಂಭ, ರೂಪರೇಷೆ, ವಿಕಾಸದ ಮಾಹಿತಿ, ಪ್ರಮುಖ ಅಂಶಗಳು ಇತ್ಯಾದಿ ಪರಿಚಯಾತ್ಮಕ ಮಾಹಿತಿಗಳನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- ಯಶಸ್ವಿನಿ ಯೋಜನೆಯ ಅನುಷ್ಠಾನದ ವಿಧಾನ, ಯೋಜನೆಯಡಿಯಲ್ಲಿ ಬರುವ ವೈದ್ಯಕೀಯ ಸೌಲಭ್ಯಗಳು, ಸೌಲಭ್ಯಗಳು ಒಳಗೊಳ್ಳುವ ವೈದ್ಯಕೀಯ ಚಿಕಿತ್ಸೆಗಳು ಹಾಗೂ ವೈಶಿಷ್ಟ್ಯಗಳು ಇವುಗಳ ಬಗ್ಗೆ ಮಾಹಿತಿಯನ್ನು ಈ ವೆಬ್‌ತಾಣದಲ್ಲಿ ನೋಡಬಹುದು.




- ಯಶಸ್ವಿನಿ ಯೋಜನೆಯ ಅರ್ಹತಾ ಮಾನದಂಡ, ನೋಂದಣಿ ಪ್ರಕ್ರಿಯೆಯ ಮಾಹಿತಿ, 2003–04ರಿಂದ ಇದುವರೆಗಿನ ಸಾಧನೆಗಳು ಅಂಕಿ ಅಂಶಗಳು, ಈ ಯೋಜನೆಯಲ್ಲಿ ಸೇರಿರುವ ಸದಸ್ಯರು, ಈ ಯೋಜನೆಯ ಫಲಾನುಭವಿಗಳ ಅಂಕಿ ಅಂಶಗಳ ಮಾಹಿತಿಯನ್ನು ಈ ತಾಣದಲ್ಲಿ ನೋಡಬಹುದು.
- ಯಶಸ್ವಿನಿ ಯೋಜನೆಯ ಸೌಲಭ್ಯವನ್ನು ಒದಗಿಸುತ್ತಿರುವ ಆಸ್ಪತ್ರೆಗಳ ಜಿಲ್ಲಾವಾರು ಪಟ್ಟಿಯನ್ನು ಅವುಗಳ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳೊಂದಿಗೆ ಈ ವೆಬ್‌ತಾಣದಿಂದ ಪಡೆಯಬಹುದು.
- ಈ ಯೋಜನೆಯ ಸೌಲಭ್ಯ ಪಡೆಯಬಹುದಾದ ವೈದ್ಯಕೀಯ ಚಿಕಿತ್ಸೆಗಳ ವಿವರವಾದ ಪಟ್ಟಿಯನ್ನು, ಈ ಸೌಲಭ್ಯ ದೊರೆಯದ ವೈದ್ಯಕೀಯ ಚಿಕಿತ್ಸೆಗಳ ಪಟ್ಟಿಯನ್ನು ಕೂಡ ಈ ವೆಬ್‌ತಾಣದಲ್ಲಿ ಪಡೆಯಬಹುದು.
- ಯಶಸ್ವಿನಿ ಯೋಜನೆಗೆ ಸಂಬಂಧಿಸಿದ ಸುತ್ತೋಲೆಗಳು, ನೋಂದಣಿ ಮಾರ್ಗದರ್ಶಿಗಳು, ಜಿಲ್ಲಾವಾರು ಸಂಯೋಜಕರ ಸಂಪರ್ಕ ಮಾಹಿತಿಗಳನ್ನು ಈ ತಾಣದಿಂದ ಪಡೆದುಕೊಳ್ಳಬಹುದು.
- ಯಶಸ್ವಿನಿ ಯೋಜನೆಯ ಷರತ್ತು ಹಾಗೂ ನಿಬಂಧನೆಗಳು, ಕಿರು ಮಾಹಿತಿ ಕೈಪಿಡಿ, ನವೀಕರಣ ಸದಸ್ಯರ ನೋಂದಣಿ ನಮೂನೆ, ಜಿಲ್ಲಾವಾರು ವಿಶೇಷ ವರದಿ ಇತ್ಯಾದಿಗಳನ್ನು ಈ ತಾಣದಿಂದ ಪಡೆಯಬಹುದು.

ಗ್ರಾಮೀಣ ಸಹಕಾರಿಗಳಿಗಾಗಿ ಸಹಕಾರ ಇಲಾಖೆಯ ಮೂಲಕ ಕರ್ನಾಟಕ ಸರ್ಕಾರ ಅರ್ಪಿಸಿರುವ ದೇಶದ ಮೊಟ್ಟ ಮೊದಲ ಗ್ರಾಮೀಣ ಸಹಕಾರಿಗಳ ಆರೋಗ್ಯ ಯೋಜನೆ ಯಶಸ್ವಿನಿ. ಇದು ಸ್ವಯಂ ನಿಧಿ ಶಸ್ತ್ರ ಚಿಕಿತ್ಸಾ ಯೋಜನೆ, ವಿಮಾ ಯೋಜನೆಯಲ್ಲ. ನಗರ ಹಾಗೂ ಗ್ರಾಮೀಣ ಭಾಗವನ್ನು ಒಳಗೊಂಡಿರುವ ಸಹಕಾರ ಕ್ಷೇತ್ರ ಸಾಮಾಜಿಕ ಕಳಕಳಿಯ ವಿನೂತನ ವೈಶಿಷ್ಟ್ಯಪೂರ್ಣ ಯೋಜನೆಗಳನ್ನು ಜಾರಿಗೆ ತರುವಂತಾಗಬೇಕಿದೆ. ಅಲ್ಲದೆ ಈಗಿರುವ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುವಲ್ಲಿ ಕೂಡ ಶ್ರಮಿಸಬೇಕಿದೆ. ಈ ನಿಟ್ಟಿನಲ್ಲಿ ಸಹಕಾರಿಗಳು ಗಮನಹರಿಸುವಂತಾಗಲಿ. ■



# ಸಂವಿಧಾನ ತಿದ್ದುಪಡಿ ತಂದಿರುವ ತಲ್ಲಣಗಳು

ಎಚ್.ಶಿವಕುಮಾರ್
ಚಾರ್ಟೆಡ್ ಅಕೌಂಟೆಂಟ್

ಸಂವಿಧಾನದ 97ನೇ ತಿದ್ದುಪಡಿಯ ಪರಿಣಾಮವಾಗಿ ದೇಶಾದ್ಯಂತ ಸಹಕಾರಿ ರಂಗ ತೀವ್ರ ತಲ್ಲಣಕ್ಕೊಳಗಾಗಿದೆ. ಇಲ್ಲಿಯವರೆವಿಗೂ, ಸಹಕಾರಿ ನೇತಾರ, ರಾಜಕಾರಣಿಗಳು ಮತ್ತು ಸಹಕಾರಿ ಇಲಾಖೆಯ ಅಧಿಕಾರಿಗಳ ಚಕ್ರವ್ಯೂಹದೊಳಗೆ ಸಿಕ್ಕು ಸಿಕ್ಕಾಗಿ ಹೋಗಿದ್ದ ಸಹಕಾರಿ ರಂಗಕ್ಕೆ ಸಂವಿಧಾನದ ತಿದ್ದುಪಡಿಯು ತಂದಿತ್ತಿರುವ ಹೊಸ ಸಲಹೆ ಸೂಚನೆಗಳು ನುಂಗಲಾರದ ಬಿಸಿ ತುಪ್ಪವಾಗಿದೆ. ಸಹಕಾರಿ ರಂಗದ ನೇತಾರರು ಸಹಕಾರಿ ರಂಗವು ಕಾರ್ಪೊರೇಟ್ ವಲಯದೊಂದಿಗೆ ನೇರವಾಗಿ ಮುಖಾಮುಖಿಯಾಗಿ ಸ್ಪರ್ಧಿಸುತ್ತಾ ಧನಾತ್ಮಕವಾಗಿ ಗುಣಾತ್ಮಕವಾಗಿ ಬೆಳೆಯಲಿ ಎಂಬ ಆಶಯದೊಂದಿಗೆ ತಂದ ತಿದ್ದುಪಡಿಯು ಈಗ ಎಲ್ಲಾ ಹಂತಗಳಲ್ಲಿ ಪ್ರತಿರೋಧಕ್ಕೆ ಕಾರಣವಾಗಿ ಬಿಟ್ಟಿದೆ.

ಪರಿವರ್ತನೆ ಜಗದ ನಿಯಮ ಎಂಬುದು ಗೀತೆಯ ಸಂದೇಶ. ನಿತ್ಯ ಪರಿವರ್ತನೆಯ ಚೈತನ್ಯ ನರ್ತನೆಯೆ ಸತ್ಯ ಜಗದಲಿ ಕಾಣೊ ಎಂಬುದು ಕವಿವಾಣಿ. ಹಾಗಾಗಿ ಪರಿವರ್ತನೆಗಳು ಯಾವುದೇ ಕ್ಷೇತ್ರದಲ್ಲಿ ಆಗಲಿಕ್ಕೇಬೇಕು. ಎಲ್ಲಿ ಪರಿವರ್ತನೆಯ ಪ್ರಕ್ರಿಯೆ ಪ್ರಾರಂಭವಾಗುತ್ತದೋ ಅಲ್ಲಿ ಪ್ರತಿರೋಧ ಪ್ರಕಟವಾಗುತ್ತದೆ ಎಂಬುದು ಆಧುನಿಕ ಮ್ಯಾನೇಜ್‌ಮೆಂಟ್ ಶಾಸ್ತ್ರಜ್ಞರ ಅಭಿಮತ. ಆದ್ದರಿಂದ ಪ್ರತಿರೋಧದ ಕಾರಣಕ್ಕಾಗಿ ಪರಿವರ್ತನೆಯ ಪ್ರಕ್ರಿಯೆಯನ್ನು ಕುಂಠಿತಗೊಳಿಸಲಾಗದು. ಸಹಕಾರಿ ಕ್ಷೇತ್ರದಲ್ಲೂ ಆಗುತ್ತಿರುವುದು ಇದೇ. 97ನೇ ಸಂವಿಧಾನಿಕ ತಿದ್ದುಪಡಿಯನ್ನು ಈಗ ಅನುಮಾನದ ದೃಷ್ಟಿಯಿಂದ ನೋಡಲಾಗುತ್ತಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ತಿದ್ದುಪಡಿಯನ್ನು ಅನುಷ್ಠಾನಕ್ಕೆ ತರಲು ತೀವ್ರವಾದ ಪ್ರಯತ್ನಗಳಾಗುತ್ತಿದ್ದರೆ ಬೇರೆ ಬೇರೆ ರಾಜ್ಯಗಳಲ್ಲಿ ಇನ್ನೂ ಪ್ರಕ್ರಿಯೆಗೆ ಚಾಲನೆಯೇ ದೊರೆತಿಲ್ಲ. ಗುಜರಾತ್ ರಾಜ್ಯದಲ್ಲಿ ಸಂವಿಧಾನದ ತಿದ್ದುಪಡಿಯನ್ನೇ ಪ್ರಶ್ನೆ ಮಾಡಲಾಗಿದ್ದು, ಗುಜರಾತ್ ಉಚ್ಛ ನ್ಯಾಯಾಲಯ ಪಿರ್ಯಾದುದಾರರ ಪರವಾಗಿ ತೀರ್ಪು ನೀಡಿದ್ದು 97ನೇ ಸಂವಿಧಾನದ ತಿದ್ದುಪಡಿಯ ಪೂರ್ವಾಪರಗಳನ್ನೇ ಅಸಿಂಧು ಎಂಬ ಇತ್ಯರ್ಥಕ್ಕೆ ಬರಲಾಗಿದೆ.

ಸಂವಿಧಾನದ 97ನೇ ತಿದ್ದುಪಡಿಯ ಪರಿಣಾಮವಾಗಿ ಸಹಕಾರಿ ರಂಗಕ್ಕೆ ಬದಲಾವಣೆ ತರಲು ಯತ್ನಿಸುತ್ತಿರುವ ರಾಜ್ಯಗಳಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ಮುಂಚೂಣಿಯಲ್ಲಿವೆ. ಕರ್ನಾಟಕದಲ್ಲಿ ಈಗಾಗಲೇ ಕರ್ನಾಟಕ ಸಹಕಾರಿ ಸಂಘಕ್ಕೆ ಚುನಾವಣಾ ಪ್ರಾಧಿಕಾರದ ರಚನೆಯಾಗಿದ್ದು, ಎಲ್ಲಾ ಸಹಕಾರ ಸಂಘಗಳು ಕಡ್ಡಾಯವಾಗಿ ಚುನಾವಣಾ ಪ್ರಾಧಿಕಾರದ ನಿರ್ದೇಶನದಂತೆ ಚುನಾವಣೆಗಳನ್ನು ನಡೆಸಬೇಕಾದ ಪರಿಸ್ಥಿತಿ ಉಂಟಾಗಿದೆ. ಚುನಾವಣೆ ಎಂದರೆ ಸಹಜವಾಗಿ ವಿಭಿನ್ನ ರೀತಿಯ ವಿವಾದಗಳು ಮತ್ತು ವಿಚಾರಗಳು ಉದ್ಭವವಾಗಿದ್ದು ಸಹಕಾರಿ ರಂಗದ ಚುನಾವಣಾ ಪ್ರಕ್ರಿಯೆ ಇನ್ನು ಮುಂದೆ ಹೆಚ್ಚು ಪ್ರಜಾಸತ್ತಾತ್ಮಕವಾಗಿ ಮತ್ತು ಕಾನೂನುಬದ್ಧವಾಗಿ ನಡೆಯುವ ಸಾಧ್ಯತೆಗಳಿವೆ. ಇದರಿಂದಾಗಿ ಸಹಕಾರಿ ರಂಗದ ಪಟ್ಟಭದ್ರ ಹಿತಾಸಕ್ತರು ಮತ್ತು ದಶಕಗಳಿಂದ ಸಹಕಾರಿ ಕ್ಷೇತ್ರದ ಚುಕ್ಕಾಣಿ ಹಿಡಿದಿದ್ದ, ಕೆಲವು ಕುಟುಂಬ ವರ್ಗದ ನೇತಾರರಿಗೆ ತೀವ್ರ ಹಿನ್ನಡೆಯಾಗುವ ನಿರೀಕ್ಷೆಯಿದೆ.

ಸಹಕಾರಿ ರಂಗದ ಲೆಕ್ಕಪರಿಶೋಧನೆ ವಿಚಾರದಲ್ಲಿ ಸಂಪೂರ್ಣ ಬದಲಾವಣೆಯಾಗಿದ್ದು, ಹೊಸ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಅಳವಡಿಸಿಕೊಳ್ಳಬೇಕು ಎಂಬ ಬಗ್ಗೆ ಸಹಕಾರಿ ಇಲಾಖೆ ಮತ್ತು ಸಹಕಾರ ಸಂಘಗಳು ಎರಡರಲ್ಲೂ ಗೊಂದಲದ ವಾತಾವರಣ ಸೃಷ್ಠಿಯಾಗಿದ್ದು ಪರಿಸ್ಥಿತಿ ದಿಕ್ಕು ತೋರದಂತಾಗಿದೆ. ಸಹಕಾರ ಇಲಾಖೆಯ ಆಡಿಟ್ ಸಿಬ್ಬಂದಿಯು ತಾವು ಪ್ರಾಮುಖ್ಯತೆ ಕಳೆದುಕೊಳ್ಳುತ್ತಿರುವ ಭೀತಿಯಲ್ಲಿ ಆತಂಕಕಾರಿ ಸನ್ನಿವೇಶವನ್ನು ಸೃಷ್ಠಿಸುತ್ತಾ ಹೊಸ ವ್ಯವಸ್ಥೆಯ ಆಚರಣೆಗೆ ಆಂತರಿಕ ತೊಡಕನ್ನು ಬಿತ್ತುತ್ತಿದ್ದಾರೆ. ಈ ಬಗ್ಗೆ ವೃತ್ತ ಪತ್ರಿಕೆಗಳಲ್ಲಿ ಅಸಮರ್ಪಕವಾದ ವರದಿಗಳು ಪ್ರಕಟವಾಗಿದ್ದು ಪರಿಸ್ಥಿತಿ ಬಿಕ್ಕಟ್ಟಾಗುತ್ತಿದೆ. ಸಹಕಾರಿ ಇಲಾಖೆ, ಸಹಕಾರಿ ಮಂತ್ರಿಗಳು, ಮತ್ತು ಸಹಕಾರಿ ಧುರೀಣರ ವಿವೇಚನಾಶೀಲ ನಿರ್ಧಾರ ಮತ್ತು ಮಾರ್ಗದರ್ಶನದ ಕೊರತೆಯಿಂದಾಗಿ ಅತೀ ಸರಳವಾಗಬಹುದಾಗಿದ್ದ ಸಹಕಾರಿ ಆಡಿಟ್ ಇಂದು ಗೊಂದಲಮಯವಾಗಿದೆ.

ಸಹಕಾರಿ ರಂಗದ ಲೆಕ್ಕ ಪರಿಶೋಧನೆ ಎಂದರೆ ಖಾಸಗಿ ವಲಯದ ಕಂಪನಿಗಳಂತಲ್ಲ. ಸಹಕಾರಿ ರಂಗದ ಹಣ ಸದಸ್ಯರ ಹಣ ಪವಿತ್ರವಾದದ್ದು. ಖಾಸಗಿ ರಂಗದಲ್ಲಿ ಲಾಭದ ಉದ್ದೇಶಕ್ಕಾಗಿ ಹಣ ಹೂಡಿಕೆಯಾದರೆ ಸಹಕಾರಿ ರಂಗದಲ್ಲಿ ಸೇವೆಯ ದೃಷ್ಠಿಯಿಂದ ಸ್ವಾವಲಂಬನೆಯ ಕನಸಿನಿಂದ ಹಣ ಸಂಗ್ರಹವಾಗಿರುತ್ತದೆ. ಆದ್ದರಿಂದ ಸಹಕಾರಿ ರಂಗದಲ್ಲಿ ವೃತ್ತಿಪರವಾದ ಕಟ್ಟುನಿಟ್ಟಾದ ಪ್ರಾಮಾಣಿಕ ಲೆಕ್ಕಪರಿಶೋಧನೆ ಆಗಬೇಕಾಗುತ್ತದೆ.

ಒಟ್ಟಾರೆ ಸಂವಿಧಾನದ 97ನೇ ತಿದ್ದುಪಡಿಯ ಆಶಯವನ್ನು ಆಚರಣೆಗೆ ತರಲು, ಸಹಕಾರಿ ರಂಗಕ್ಕೆ ಸ್ವಾಯತ್ತತೆಯನ್ನು ಸ್ವಾಭಿಮಾನವನ್ನು ನೀಡಲು ರಾಜಕೀಯ ಧುರೀಣರು, ಸಹಕಾರಿ ನೇತಾರರು ಕ್ರಿಯಾಶೀಲರಾಗಬೇಕಾಗಿದೆ, ಸ್ಪಂದಿಸಬೇಕಾಗಿದೆ. ಕಳೆದ ಮೂರ್‍ನಾಲ್ಕು ತಿಂಗಳಲ್ಲಿ ಇಂತಹ ಆಸಕ್ತಿ, ಉತ್ಸಾಹ ನಿರೀಕ್ಷೆ ಕಂಡುಬರದೆ ಇರುವುದು ಸಹಕಾರಿ ರಂಗಕ್ಕೆ ಹಿನ್ನಡೆಯಾದಂತಾಗಿದೆ. ರಥೋತ್ಸವ ಎಂದರೆ ಕಣ್ಣೆದುರು ಬರುವುದು ತೇರನ್ನು ಮುಂದಕ್ಕೆಳೆಯುವುದು ಮಾತ್ರ. ಹಿಂದಕ್ಕೆ ತಳ್ಳುವುದಲ್ಲ. ಸಹಕಾರಿ ರಂಗದ ತೇರನ್ನು ಯಾಕೋ ಹಿಂದಕ್ಕೆ ತಳ್ಳುತ್ತಿರುವಂತೆ ಭಾಸವಾಗುತ್ತಿದೆ. ■

# "ಸಹಕಾರ ಸಂಸ್ಥೆಗಳು ದೇಶದ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತವೆ" 16ನೇ ರಾಷ್ಟ್ರೀಯ ಸಹಕಾರ ಕಾಂಗ್ರೆಸ್‌ನಲ್ಲಿ ರಾಷ್ಟ್ರಪತಿ ಶ್ರೀ ಪ್ರಣವ ಮುಖರ್ಜಿ



ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲಿ ಸಾಮಾನ್ಯ ಜನರ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಪಾತ್ರ ಮಹತ್ವದ್ದಾಗಿದೆ. ಜಗತ್ತಿನ ಸಹಕಾರ ಕ್ಷೇತ್ರದಲ್ಲಿ 700 ಮಿಲಿಯನ್ ಅಂದರೆ 70 ಕೋಟಿಗೂ ಹೆಚ್ಚು ಜನರಿದ್ದಾರೆ. 100 ಮಿಲಿಯನ್ನೂ ಹೆಚ್ಚು ಜನರಿಗೆ ( 10 ಕೋಟಿ ಜನರಿಗೆ ) ಉದ್ಯೋಗ ಒದಗಿಸಿದೆ.

ಭಾರತದಲ್ಲಿ 5,95,215ಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳಿವೆ. 24ಕೋಟಿ 92 ಲಕ್ಷಕ್ಕೂ ಹೆಚ್ಚು ಸದಸ್ಯ ಬಳಗವಿದೆ. 3.37ಸಾವಿರ ಕೋಟಿ ಹೆಚ್ಚು ಪಾಲು ಬಂಡವಾಳವಿದೆ. 58.74 ಸಾವಿರ ಕೋಟಿ ದುಡಿಯುವ ಬಂಡವಾಳವಿದೆ. ಶೇಕಡಾ 97 ಪ್ರತಿಶತ ಗ್ರಾಮಗಳು ಈ ಕ್ಷೇತ್ರ ವ್ಯಾಪಿಸಿದೆ. ಪ್ರತಿಶತ 19% ರಷ್ಟು ವ್ಯವಸಾಯ ಸಾಲ ಈ ಕ್ಷೇತ್ರದಿಂದ ನೀಡಲಾಗುತ್ತಿದೆ. ಈ ಕ್ಷೇತ್ರದ ಮೂಲಕ 36% ರಸಗೊಬ್ಬರ ವಿತರಣೆ, 46.6% ಸಕ್ಕರೆ, 33.5% ಗೋಧಿ ಉತ್ಪಾದನೆಯಾಗುತ್ತಿದೆ. 1.22 ಮಿಲಿಯನ್ ಜನರಿಗೆ ನೇರ ಉದ್ಯೋಗ ಹಾಗೂ 15.47 ಮಿಲಿಯನ್ ಜನರಿಗೆ ಸ್ವಯಂ ಉದ್ಯೋಗವನ್ನು ಈ ಕ್ಷೇತ್ರ ಒದಗಿಸಿದೆ. ಕೊಲಂಬಿಯ ದೇಶದಲ್ಲಿ ನ್ಯಾಶನಲ್ ಹೆಲ್ತ್ ಕೇರ್ ಸಹಕಾರ ಸಂಸ್ಥೆಯು ರಾಷ್ಟ್ರದ ನಂ. 2 ಉದ್ಯೋಗ ನೀಡುವ ಸಂಸ್ಥೆಯಾಗಿದೆ.

**ವ್ಯವಸಾಯ ಕ್ಷೇತ್ರದಲ್ಲಿ :** ನೆದರಲ್ಯಾಂಡ್‌ನಲ್ಲಿ 83% ಫಿನ್‌ಲ್ಯಾಂಡ್‌ನಲ್ಲಿ 79% ಇಟಲಿಯಲ್ಲಿ 55% ವ್ಯವಸಾಯ ಉತ್ಪಾದನೆಯು ಸಹಕಾರ ಕ್ಷೇತ್ರ ಮೂಲಕವೆ ಆಗುತ್ತಿದೆ. ಅಮೇರಿಕದಲ್ಲಿ 2000 ರಲ್ಲಿ ವ್ಯವಸಾಯ ಕ್ಷೇತ್ರದಲ್ಲಿ 3,346 ಸಹಕಾರ ಸಂಸ್ಥೆಗಳಲ್ಲಿ 3,085,052 ಸದಸ್ಯರಿಂದ ಕೊಡಿತ್ತು 99 ಬಿಲಿಯನ್‌ಡಾಲರ್‌ಗಳಷ್ಟು ವ್ಯವಹಾರ ಈ ಕ್ಷೇತ್ರದಿಂದ ನಿರ್ವಹಿಸಲಾಗಿದೆ. ಕಿನ್ಯಾದಲ್ಲಿ 2001ರಲ್ಲಿ ವ್ಯವಸಾಯ ಉತ್ಪಾದನೆ ಸಹಕಾರ ಕ್ಷೇತ್ರದ ಮೂಲಕ 100,08 ಮಿಲಿಯನ್ ಡಾಲರ್‌ನಷ್ಟು ನಿರ್ವಹಿಸಲಾಗಿದೆ.

ಸಹಕಾರಿ ಬ್ಯಾಂಕಿಂಗ ಹಾಗೂ ಕ್ರೆಡಿಟ್ ಕ್ಷೇತ್ರದಲ್ಲಿ: ಸದಸ್ಯರ ಆದಾಯ ಹೆಚ್ಚಿಸುವಲ್ಲಿ ಕ್ರೆಡಿಟ್ ಯೂನಿಯನ್ನಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಜಾಗತಿಕ ಮಟ್ಟದಲ್ಲಿ 28 ಆಫ್ರಿಕ ದೇಶಗಳು, 11 ಏಷ್ಯಾದ ರಾಷ್ಟ್ರಗಳು 3 ಫೇಸಿಫಿಕ್ ರಾಷ್ಟ್ರಗಳು, 13 ಕೆರಿಬಿಯನ್ ದೇಶಗಳು,16 ಅಮೇರಿಕಾ ದೇಶಗಳು, 5 ಯುರೋಪ್ ದೇಶಗಳು 34,839 ಯೂನಿಯನ್‌ಗಳು 95,926,879 ಸದಸ್ಯರುಗಳಿದ್ದಾರೆ. ಜಾಗತಿಕ ಆರ್ಥಿಕ ನಕ್ಷೆಯಲ್ಲಿ ಸಹಕಾರಿ ಬ್ಯಾಂಕುಗಳು 5588 ಬಿಲಿಯನ್ ಡಾಲರುಗಳ ಆಸ್ತಿಯನ್ನು ಹೊಂದಿದೆ. ಎಶಿಯಾ ಖಂಡದ ಅರ್ಥ ವ್ಯವಸ್ಥೆಯಲ್ಲಿ 44.6%ರಷ್ಟು ಪಾಲು ಹೊಂದಿರುವ ಎರಡನೇ ಮಹತ್ವದ ಆರ್ಥಿಕವಲಯವಾಗಿದೆ

**ಹೊಸ ವಲಯಗಳಲ್ಲಿ ಕಾರ್ಯಾಚರಣೆ :** ಸಹಕಾರ ತತ್ವಗಳ ಬೃಹತ ವ್ಯಾಪ್ತಿಯ ಹಿನ್ನೆಲೆಯಲ್ಲಿ ಸಹಕಾರ ಕ್ಷೇತ್ರ ಹೊಸ ಹೊಸ ವಲಯಗಳಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ. ಹೊಸ ಹೊಸ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಬಗ್ಗೆ ಸಂಶೋಧನೆಯನ್ನು ನಡೆಸಿದೆ. ಪರಿಣಾಮವಾಗಿ ಸಹಕಾರ ಸಂಸ್ಥೆಗಳು ವ್ಯವಹಾರ ಅಭಿವೃದ್ಧಿ ಕೇಂದ್ರಗಳಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿವೆ. ಯುನೈಟೆಡ್ ಸ್ಟೇಟ್ಸ್‌ನಲ್ಲಿ ಅನೇಕ ವರ್ಷಗಳ ಕಾಲ ಸೇವಾ ಸಹಕಾರ ಸಂಸ್ಥೆಗಳು ವಿದ್ಯುಚ್ಛಕ್ತಿ ನಿರ್ವಹಣ ಕೇಂದ್ರಗಳಾಗಿ ಕಾರ್ಯನಿರ್ವಹಿಸಿವೆ 26 ಮಿಲಿಯನ್ ಸದಸ್ಯರಿಗೆ ಉತ್ತಮ ಬೆಲೆಯಲ್ಲಿ ವಿದ್ಯುಚ್ಛಕ್ತಿಯನ್ನು ನೀಡುತ್ತ ಬಂದಿವೆ.

ಯು.ಕೆ.ನಲ್ಲಿ ಇತ್ತೀಚೆಗೆ ದೂರವಾಣಿ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ, ಉತ್ತಮ ಪ್ರಗತಿ ಸಾಧಿಸಿವೆ. ಫಿನಲ್ಯಾಂಡನಲ್ಲಿ ಫಾಸ್ಟ್‌ಫುಡ್ ವಲಯದಲ್ಲಿ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಯು.ಎಸ್ ನಲ್ಲಿ ಸಬ್ ಕಂಟ್ರಾಕ್ಟರ್ಸ್ ಸಹಕಾರ ಸಂಸ್ಥೆಗಳು ಉತ್ತಮ ಕಾರ್ಯನಿರ್ವಹಿಸುತ್ತಿವೆ. ಯು.ಎಸ್‌ನಲ್ಲಿ ವಿದ್ಯಾರ್ಥಿಗಳಿಗಾಗಿ ಕ್ಯಾಂಪಸ್ ಕೋ-ಆಪರೇಟಿವಗಳು ಕಾರ್ಯಾರಂಭ ಮಾಡಿವೆ. ಫ್ರಾನ್ಸ ದೇಶದಲ್ಲಿ ಇ-ಕಾಮರ್ಸ ಸಹಕಾರಿ ಸಂಸ್ಥೆಗಳು ಪ್ರಾರಂಭವಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸದಸ್ಯರುಗಳ ಇ-ಮೇಲ್ ಅಡ್ರೆಸ್ಗಳು,ಮೇಲಿಂಗ ಲಿಸ್ಟ ವೆಬ್ ಲಿಸ್ಟ, ಇತ್ಯಾದಿ ಸೇವೆಗಳನ್ನು ಈ ಸಂಸ್ಥೆಗಳು ಒದಗಿಸುತ್ತಿವೆ.

ಖಾಸಗಿ ಕಂಪನಿ ಕ್ಷೇತ್ರದ ಬೆಳವಣಿಗೆ ಪ್ರಮಾಣ ಹಾಗೂ ಸೇವಾ ವ್ಯಾಪ್ತಿಯನ್ನು ಗಮನಿಸಿದಾಗ ಸಹಕಾರ ಕ್ಷೇತ್ರದ ಬೆಳವಣಿಗೆಯ ಪ್ರಮಾಣ ಹಾಗೂ ಸೇವಾವ್ಯಾಪ್ತಿ ಗಮನಾರ್ಹ ಹಾಗೂ ಈ ಕ್ಷೇತ್ರ ಮುಂಚೂಣಿಯಲ್ಲಿರುವುದು ಹೆಮ್ಮೆಯ ವಿಷಯ.

ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿಯಲ್ಲಿ ದಿನಾಂಕ 25/6/20013 ರಂದು ಏರ್ಪಡಿಸಿದ್ದ 16ನೆ ಇಂಡಿಯನ್ ಕೋಆಪರೇಟಿವ್



"ಆಹಾರ ಉತ್ಪಾದನೆಗೆ ಸಹಕಾರ ಕ್ಷೇತ್ರದ ಕೊಡುಗೆ ಅಪಾರ"

– ಕೇಂದ್ರ ಕೃಷಿ ಸಚಿವ ಶ್ರೀ ಶರದ್ ಪವಾರ

ಕಾಂಗ್ರೆಸ್‌ನ್ನು ಉದ್ಘಾಟಿಸಿ ದೇಶದ ಅರ್ಥವ್ಯವಸ್ಥೆಯಲ್ಲಿ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಕೊಡುಗೆ ಹಿಂದೆಂದಿಗಿಂತಲೂ ಹೆಚ್ಚಿದೆ. ದೇಶದಲ್ಲಿ 6 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳಿವೆ.24 ಕೋಟಿಗೂ ಹೆಚ್ಚು ಸದಸ್ಯರಿದ್ದಾರೆ.

ದೇಶದ ಎಲ್ಲ ಅಭಿವೃದ್ಧಿಯ ಆಯಾಮಗಳಲ್ಲಿ ಸಹಕಾರಿ ಕ್ಷೇತ್ರದ್ದು ಮಹತ್ವದ ಪಾಲು ಎಂದರು. ಈ ದೇಶದ ಸಹಕಾರ ಚಳುವಳಿ ಪ್ರಪಂಚದಲ್ಲಿಯೆ ದೊಡ್ಡದು, ವೈವಿಧ್ಯಮಯವಾದುದು, ಗಮನಾರ್ಹ ಸಾಧನೆ ಮಾಡಿದೆ. ಇತರೆ ದೇಶಗಳಿಗೆ ಮಾದರಿಯಾಗಿದೆ. ಅನುಕರಣೀಯವಾಗಿದೆ ಮತ್ತು ಈ ಚಳುವಳಿ ಇನ್ನೂ ಹೆಚ್ಚು ಬಲಶಾಲಿಯಾಗಿ ಕಾರ್ಯನಿರ್ವಹಿಸಬೇಕಾಗಿದೆ. ಎಂದು ತಿಳಿಸಿದರು

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಕೃಷಿ ಸಚಿವ ಶ್ರೀ ಶರದ್ ಪವಾರರವರು ಜಗತ್ತಿನ ಆಹಾರ ಧಾನ್ಯಗಳ ಬೆಲೆಗಳ ನಿಯಂತ್ರಣದಲ್ಲಿ ನಮ್ಮ ದೇಶದ ಪಾತ್ರ ಹಿರಿದಾಗಿದೆ. ಆಹಾರ ಧಾನ್ಯಗಳ ಉತ್ಪಾದನೆಗೆ ಸಹಕಾರ ಕ್ಷೇತ್ರದ ಪಾಲು ಹಿರಿದಾಗಿದೆ. ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ದೆಹಲಿಯ ಮುಖ್ಯಮಂತ್ರಿ ಶ್ರೀಮತಿ ಶೀಲಾ ದಿಕ್ಷೀತರವರು ಮಾತನಾಡಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಸರಕಾರ ನೆರವು ನೀಡಲು ಬದ್ಧವಾಗಿದೆ ಎಂದರು.

ಪ್ರಾರಂಭದಲ್ಲಿ ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದ ರಾಷ್ಟ್ರೀಯ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಚಂದ್ರಪಾಲ ಸಿಂಗ ಯಾದವರವರು ದೇಶದ ಸಹಕಾರ ಚಳವಳಿಯ ಸಾಧನೆಗಳನ್ನು ಹಾಗೂ ಸವಾಲುಗಳನ್ನು ವಿವರಿಸುತ್ತ ಸರಕಾರ ತರಲು ಉದ್ದೇಶಿಸಿರುವ ಡಿ.ಟಿ.ಸಿ.



**"ಡಿ.ಟಿ.ಸಿ ( ನೇರ ತೆರಿಗೆ ಸಂಹಿತೆ) ಯಲ್ಲಿ ಸಹಕಾರ ಕ್ಷೇತ್ರಕ್ಕೆ ವಿನಾಯಿತಿ ಅಗತ್ಯ"**

**– ಎನ್.ಸಿ.ಯು.ಐ. ಅಧ್ಯಕ್ಷ ಶ್ರೀ ಚಂದ್ರಪಾಲಸಿಂಗ್ ಯಾದವ್.**

(ನೇರ ತೆರಿಗೆ ಸಂಹಿತೆ) ಯಲ್ಲಿ ಸಹಕಾರ ಸಂಘಗಳಿಗೆ ವಿನಾಯಿತಿ ಅವಶ್ಯಕ. ವಿನಾಯಿತಿ ನೀಡದಿದ್ದರೆ ಸಹಕಾರಿ ಕ್ಷೇತ್ರದ ಬೆಳವಣಿಗೆಯಲ್ಲಿ ಹಿನ್ನಡೆಯಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅನೇಕ ವಿಷಯಗಳ ಬಗ್ಗೆ ವಿಚಾರಗೋಷ್ಠಿಗಳು ನಡೆದವು ದೇಶದ 2500 ಸಹಕಾರಿಗಳು ಸಹಕಾರಿ ಕಾಂಗ್ರೆಸ್‌ನಲ್ಲಿ ಭಾಗವಹಿಸಿದ್ದರು. ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪಂಜಾಬ ರಾಜ್ಯದ ರಾಜ್ಯಪಾಲ ಶ್ರೀ ಶಿವರಾಜ ಪಾಟೀಲರವರು ಎರಡು ದಿನಗಳ ಸಹಕಾರಿ ಕಾಂಗ್ರೆಸ್ ಸಹಕಾರ ಕ್ಷೇತ್ರದ ಅಬಿವೃದ್ಧಿಗೆ ಪೂರಕವಾಗುವಲ್ಲಿ ಸಹಕಾರಿಯಾಗಲಿ ಎಂದು ಶುಭಹಾರೈಸಿದರು.

ರಾಷ್ಟ್ರೀಯ ಸಹಕಾರ ಯೂನಿಯನ್ನಿನ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಡಾ.ದಿನೇಶರವರು ಸಹಕಾರಿ ಕಾಂಗ್ರಸ್ಸಿನ ನಿರ್ಣಯಗಳು ಸಹಕಾರ ಕ್ಷೇತ್ರದ ಕಾರ್ಯಾಚರಣೆಗೆ ಹೊಸ ದಿಕ್ಸೂಚಿಯಾಗಲಿದೆ ಅಬಿವೃದ್ಧಿಗೆ ಪೂರಕವಾಗುವ ಅನೇಕ ಮಹತ್ವದ ನಿರ್ಣಯಗಳನ್ನು ತೆಗೆದುಕೊಂಡಿದೆ. ■

## ಶ್ರೀ ಬೀರೇಶ್ವರ ಸೌಹಾರ್ದ ಕ್ರೇಡಿಟ್ ಸಹಕಾರಿಯ 23ನೇ ವಾರ್ಷಿಕೋತ್ಸವ

**ಮಾರ್ಚ್ 2013ರ ಅಂಕಿ ಸಂಖ್ಯೆಗಳು :** ಸದಸ್ಯರು – 51, 388, ಶೇರು ಬಂಡವಾಳ – 5 ಕೋಟಿ 41 ಲಕ್ಷ, ನಿಧಿಗಳು – 14 ಕೋಟಿ 65 ಲಕ್ಷ, ಠೇವುಗಳು – 377 ಕೋಟಿ 37 ಲಕ್ಷ, ಶಿಲ್ಕು – 15 ಕೋಟಿ 47 ಲಕ್ಷ, ಸಾಲ ಮತ್ತು ಮುಂಗಡಗಳು – 298 ಕೋಟಿ 71 ಲಕ್ಷ, ಗುಂತಾವಣೆಗಳು – 80 ಕೋಟಿ 37 ಲಕ್ಷ, ಲಾಭ – 3 ಕೋಟಿ 81 ಲಕ್ಷ 38 ಸಾವಿರ.




23ನೇ ವಾರ್ಷಿಕ ಸಮ್ಮೇಳನದಲ್ಲಿ ಪಾಲ್ಗೊಂಡ ಅಕ್ಕ ಅನ್ನಪೂರ್ಣದೇವಿ ಮತ್ತು ಅಕ್ಕ ಗಂಗಾಬಿಕೆ ದೇವಿ ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13.
RNI No. KARBIL - 2004/18001. Pages 20

## ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿಯ ರಾಯಚೂರು ಶಾಖೆಯ ಉದ್ಘಾಟನೆ

# ಸಹಕಾರಿಗಳ ಪ್ರಾಮಾಣಿಕತೆ ಕ್ಷೇತ್ರದ ಅಭಿವೃದ್ಧಿಗೆ ನಾಂದಿ - ಸಹಕಾರ ಸಚಿವ ಶ್ರೀ ಮಹದೇವ ಪ್ರಸಾದ್




ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿಯ 5ನೇ ಶಾಖೆಯನ್ನು ರಾಯಚೂರು ನಗರದ ಸಿಯಾತಲಾಬ್‌ದಲ್ಲಿ ದಿನಾಂಕ : 27/06/2013ರಂದು ಸಹಕಾರ ಸಚಿವರಾದ ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ ಅವರು ಉದ್ಘಾಟಿಸಿದರು. ಶಾಖೆಯ ಉದ್ಘಾಟನೆ ಮಾಡಿ ಮಾತನಾಡಿದ ಮಾನ್ಯ ಸಹಕಾರ ಸಚಿವರು, **"ಗ್ರಾಹಕರಿಗೆ ಉತ್ತಮ ಸೇವೆ ನೀಡಿದರೆ ಯಶಸ್ಸು ಖಚಿತ ಎಂಬುವುದಕ್ಕೆ ಶ್ರೀ ಭ್ರಮರಾಂಬ ಸಹಕಾರಿಯು 5ನೇ ಶಾಖೆ ಪ್ರಾರಂಭಿಸಿರುವುದೇ ಸಾಕ್ಷಿ"** ಎಂದು ನುಡಿದರು. ಉದ್ಘಾಟನಾ ಕಾರ್ಯಕ್ರಮದ ಸಾನಿಧ್ಯವನ್ನು ಷ.ಭ್ರ.ಅಭಿನವ ರಾಚೋಟಿ ವೀರಶಿವಾಚಾರ್ಯ ಮಹಾಸ್ವಾಮಿಗಳು, ಹಿರೇ ಮಠ ಸೋಮವಾರ ಪೇಟೆ, ರಾಯಚೂರು ಅವರು ವಹಿಸಿಕೊಂಡಿದ್ದರು.

ಶ್ರೀ ಎ.ವೆಂಕಟೇಶ ನಾಯಕ, ಶಾಸಕರು ದೇವದುರ್ಗ, ಶ್ರೀ ಪ್ರತಾಪಗೌಡ ಪಾಟೀಲ್, ಶಾಸಕರು, ಮಸ್ಕಿ ಕ್ಷೇತ್ರ, ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪೂರು, ಮಾಜಿ ಸಚಿವರು, ಶ್ರೀ ಮನೋಹರ ಮಸ್ಕಿ, ಮಾಜಿ ವಿಧಾನ ಪರಿಷತ್ ಸದಸ್ಯರು. ಶ್ರೀಮತಿ ರಾಜಶ್ರೀ ಅಗಸರ, ಜಂಟಿ ನಿಬಂಧಕರು, ಗುಲ್ಬರ್ಗಾ ಪ್ರಾಂತ ವಿಭಾಗ, ರಾಯಚೂರು, ಶ್ರೀ ಎಸ್.ಹೆಚ್. ಸಂತೋಷಕುಮಾರ ಕೆ.ಸಿ.ಎಸ್, ರಾಯಚೂರು, ಶ್ರೀ ವಿಶ್ವನಾಥ ಪಾಟೀಲ್, ಅಧ್ಯಕ್ಷರು, ಆರ್.ಡಿ.ಸಿ.ಸಿ. ಬ್ಯಾಂಕ್, ರಾಯಚೂರು ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರೀಷತ್ತು ಅಧ್ಯಕ್ಷರಾದ ಶ್ರೀ ಮಹಾಂತೇಶ ಮಸ್ಕಿ, ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಭ್ರಮರಾಂಬ ಸಹಕಾರಿಯ ಅಧ್ಯಕ್ಷರಾದ ಡಾ: ಶಿವಶರಣಪ್ಪ ಇತ್ಲಿ, ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡಿದ್ದರು. ಶ್ರೀ ಭ್ರಮರಾಂಬ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ವೀರೇಶ ಹಿರೇಮಠ ಅವರು ವಂದಿಸಿದರು.

**Leader of Leaders - KarnataKa state souharda federaL Co-op-Ltd BangaLore**

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತೀಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ಸಹ ಪ್ರಧಾನ ವ್ಯವಸ್ಥಾಪಕ | ಶ್ರೀಮತಿ ಕೃತಿ ಜನಾರ್ಧನ್ | 9900244207 |
| ಸಹ ಪ್ರಧಾನ ವ್ಯವಸ್ಥಾಪಕ | ಶ್ರೀ ಶ್ರೀಕಾಂತ | 9916814888 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು - 10.
web : www.souharda.coop,
E-mail : souharda@souharda.coop,
**ದೂ.ಸಂ :** 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜೆ.ಕಾರಕೂನ**
ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ - 1, ದೂ. 0831-2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1-4/3 ಎ ಸಂಜೆವರಾವ್ ಬಡಾವಣೆ,
ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ - 585102. ದೂ. 08472-270222, ಮೊ. 9900990268.

Edited, Printed and Published by Sharan Gouda G. Patil -Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010